ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

25 ಮೇ, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 75 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ 32ರನ್, 3 ವಿಕೆಟ್ ಗಳಿಸಿ ಸಂಭ್ರಮಿಸಿದ ರಾಜಸ್ಥಾನ ರಾಯಲ್ಸ್ ತಂಡದ ಚೋಫ್ರಾ, ಆರ್ಚರ್...

ಒಂದು ಕಪ್ ಚಹಾದ ಕಥೆ » 2

ಆರ್ಚರ್ ಆಟ : ಪ್ಲೇ ಆಫ್‌ಗೆ ರಾಜಸ್ಥಾನ ರಾಯಲ್ಸ್ » 3

ಎಬೋಲಾ ಸೋಂಕು : 3 ದೇಶಗಳ ಪ್ರವಾಸ ನಿಷೇಧ » 4

ಇರಾನ್-ಅಮೇರಿಕಾ ಸಂಘರ್ಷ: ಶೀಘ್ರ ಮಹತ್ವದ ನಿರ್ಧಾರ

ಭಾರತ ಪ್ರವಾಸದಲ್ಲಿರುವ ಮಾರ್ಕೊ ರುಬಿಯೊ | ಯುದ್ಧ ನಿಲ್ಲುವ ಆಶಯ

• ಪ್ರಜೋದಯ ವರದಿ

ನವದೆಹಲಿ: ಇರಾನ್ ಜೊತೆಗಿನ ಶಾಂತಿ ಒಪ್ಪಂದಕ್ಕೆ ಸಂಬಂಧಿಸಿ ಆದಷ್ಟು ಬೇಗ ಮಹತ್ವದ ಸುದ್ದಿ ಪ್ರಕಟವಾಗಲಿದೆ ಎಂದು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾಲ್ಕು ದಿನಗಳ ಕಾಲ ಭಾರತ ಪ್ರವಾಸದಲ್ಲಿರುವ ಅವರು ಭಾನುವಾರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಜೊತೆ ಜಂಟಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಮುಂದಿನ ಕೆಲವು ದಿನಗಳಲ್ಲಿ ವಿಶ್ವಕ್ಕೆ ಒಳ್ಳೆಯ ಸುದ್ದಿ ಸಿಗುವ ವಿಶ್ವಾಸವಿದೆ. ಅಮೇರಿಕಾ ಮತ್ತು ಇಸ್ರೇಲ್ ಜಂಟಿ ದಾಳಿಗೆ ಪ್ರತಿಯಾಗಿ ಇರಾನ್ ಬಹುತೇಕ ಬಂದ್ ಮಾಡಿದ್ದ ಹೊರ್ಮುಜ್ ಜಲಸಂಧಿಯ ಬಗ್ಗೆ ಹೊಸ ಶಾಂತಿ ಒಪ್ಪಂದ ಪರಿಹಾರ ಕಲ್ಪಿಸಲಿದೆ ಎಂದರು.

ಅಮೇರಿಕಾ ಅಧ್ಯಕ್ಷ ಟ್ರಂಪ್ ಯಾವಾಗಲೂ ರಾಜತಾಂತ್ರಿಕ ಪರಿಹಾರದ ಮೂಲಕ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಆದ್ಯತೆ ನೀಡುತ್ತಾರೆ. ಮಾತುಕತೆಗಳು ಅನಿಶ್ಚಿತವಾಗಿದ್ದರೂ ಸಹ ಬಹಳಷ್ಟು ಮಟ್ಟಿಗೆ ಪ್ರಗತಿ ಸಾಧಿಸಿದೆ. ಈ ಕುರಿತಂತೆ ಒಂದೆರಡು ದಿನಗಳಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುವ ಸಾಧ್ಯತೆಗಳಿವೆ. ಆದಾಗ್ಯೂ ಇರಾನ್ ಪರಮಾಣು ಶಸ್ತ್ರ ಹೊಂದಲು ಹಾಗು ಹೊರ್ಮುಜ್‌ನಲ್ಲಿ ಟೋಲ್ ಸಂಗ್ರಹ ಮಾಡಲು ಸಾಧ್ಯವಿಲ್ಲವೆಂದು ಪುನರುಚ್ಚರಿಸಿದ್ದಾರೆ.

ಯುದ್ಧ ವಿರಾಮ ವಿಸ್ತರಣೆ

ಅಮೇರಿಕಾ ಮತ್ತು ಇರಾನ್ ನಡುವಿನ 60 ದಿನಗಳ ಯುದ್ಧ ವಿರಾಮ ವಿಸ್ತರಣೆಯನ್ನು ಒಳಗೊಂಡ ಒಪ್ಪಂದಕ್ಕೆ ಎರಡೂ ದೇಶಗಳು ಸಮೀಪಿಸುತ್ತಿವೆ. ಈ ಅವಧಿಯಲ್ಲಿ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲಾಗುವುದು, ಇರಾನ್‌ಗೆ ಮುಕ್ತವಾಗಿ ತೈಲ ಮಾರಾಟಕ್ಕೆ ಅವಕಾಶ ನೀಡಲಾಗುವುದು ಹಾಗು ಇರಾನ್‌ನ ಅಣು ಕಾರ್ಯಕ್ರಮವನ್ನು ನಿಯಂತ್ರಿಸುವ ಕುರಿತು ಮಾತುಕತೆ ನಡೆಯಲಿದೆ ಎಂದು ಅಮೇರಿಕಾದ ಅಧಿಕಾರಿಯನ್ನು ಉಲ್ಲೇಖಿಸಿ ವರದಿ ಹೇಳಿದೆ.

ಮಧ್ಯಪ್ರಾಚ್ಯದಲ್ಲಿ ಅಮೇರಿಕಾ-ಇರಾನ್ ನಡುವೆ ಉದ್ವಿಗ್ನತೆ ಶಮನಗೊಳಿಸಲು ಶಾಂತಿ ಒಪ್ಪಂದಕ್ಕಾಗಿ ಮಧ್ಯವರ್ತಿಗಳ ಮೂಲಕ ರಾಜತಾಂತ್ರಿಕ ಮಾತುಕತೆ ಪ್ರಯತ್ನಗಳು ಮುಂದುವರೆದಿದ್ದು, ಇಸ್ರೇಲ್ ಹಾಗು ಗಲ್ಫ್‌ನಲ್ಲಿನ ಮಿತ್ರ ರಾಷ್ಟ್ರಗಳೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆ ಫಲಪ್ರದವಾಗಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಈ ಕುರಿತು ತಮ್ಮ ಟ್ರುತ್ ಸೋಷಿಯಲ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ನಾನು ಶ್ವೇತಭವನ ಕಚೇರಿಯಲ್ಲಿ ಇರಾನ್ ಯುದ್ಧದ ಶಾಂತಿಗೆ ಸಂಬಂಧಿಸಿದ ತಿಳಿವಳಿಕೆ ಒಪ್ಪಂದ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳ ಕುರಿತು ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್, ಕತಾರ್, ಪಾಕಿಸ್ತಾನ, ಟರ್ಕಿ, ಈಜಿಪ್ಟ್, ಜೋರ್ಡಾನ್ ಮತ್ತು ಬಹ್ರೇನ್ ಸೇರಿ ಇತರೆ ದೇಶಗಳ ನಾಯಕರೊಂದಿಗೆ ಸಂಭಾಷಣೆ ನಡೆಸಿದ್ದೇನೆ. ಮಧ್ಯವರ್ತಿಗಳು ಸೇರಿ ಇರಾನ್ ಹಾಗು ಅಮೇರಿಕಾ ನಡುವೆ ಒಪ್ಪಂದವನ್ನು ಅಂತಿಮಗೊಳಿಸುವ ಹಂತದ ಕುರಿತು ಚರ್ಚಿಸಿದ್ದೇವೆ ಎಂದಿದ್ದಾರೆ.

ಟ್ರಂಪ್ ಮಾತು ಒಪ್ಪದ ಇರಾನ್

ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ತಳ್ಳಿ ಹಾಕಿದೆ. ಟ್ರಂಪ್ ಹೇಳಿಕೆಗಳು ಪಾಕಿಸ್ತಾನದ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಟೆಹ್ರಾನ್‌ಗೆ ಅಮೇರಿಕಾದ ಶಾಂತಿ ಪ್ರಸ್ತಾವನೆ ಕುರಿತು ಮಾತುಕತೆ ನಡೆಸಿದ ಬಳಿಕ ಬಂದಿದೆ. ಆದಾಗ್ಯೂ ಈ ಮಾತುಕತೆಯಲ್ಲಿ ಇರಾನ್ ಒಪ್ಪಂದಕ್ಕೆ ಮನ್ನಣೆ ನೀಡಿಲ್ಲ ಹಾಗು ತಮ್ಮ ಷರತ್ತುಗಳಿಗೆ ಒಪ್ಪಿಕೊಂಡಾಗ ಮಾತ್ರ ಇದು ಸಾಧ್ಯ ಎಂಬ ಸಂದೇಶ ಕಳುಹಿಸಿದೆ ಎಂದು ವರದಿಯಾಗಿದೆ. ಈ ನಡುವೆ ಟ್ರಂಪ್ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿರುವ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಇದೊಂದು ಪ್ರಚಾರ ತಂತ್ರವೆಂದು ಟೀಕಿಸಿದೆ.

ಎಲ್ಲಾ ಪಕ್ಷಗಳು ಕುರುಬ ಸಮುದಾಯವನ್ನು ಸೆಳೆಯುತ್ತಿವೆ

ಬೆಂಗಳೂರು: ಕುರುಬ ಸಮಾಜ ಸಂಘಟಿತವಾಗಿರುವ ಕಾರಣ ಎಲ್ಲಾ ರಾಜಕೀಯ ಪಕ್ಷಗಳು ನಮ್ಮ ಸಮುದಾಯವನ್ನು ಸೆಳೆಯಲು ಮುಂದಾಗುತ್ತಿವೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ. ರೇವಣ್ಣ ಹೇಳಿದರು.

ಹಾಲುಮತ ಉದ್ಯಮಿಗಳ ಸಂಘ ಭಾನುವಾರ ಆಯೋಜಿಸಿದ್ದ ಕನಕೋದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು, ಇತ್ತೀಚೆಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ನಾನು ಕುರುಬ ಸಮುದಾಯವನ್ನು ಸಂಘಟಿಸುವ ಕೆಲಸ ಮಾಡುತ್ತೇನೆಂಬ ಹೇಳಿಕೆ ನೀಡಿದ್ದಾರೆ. ಎಲ್ಲಾ ಪಕ್ಷಗಳಲ್ಲಿ ನಮ್ಮ ಸಮುದಾಯದ ನಾಯಕರಿದ್ದಾರೆ. ಕುರುಬ ಸಮುದಾಯದ ನಾಯಕರನ್ನು ಬೆಳೆಸುವ ಕೆಲಸ ಆಗಬೇಕು. ಪಕ್ಷ ಅಥವಾ ಸಮುದಾಯ ಅಂತ ಬಂದಾಗ ನಾನು ಸಮಾಜದ ಪರವಾಗಿ ಕೆಲಸ ಮಾಡುತ್ತೇನೆ ಎಂದರು.

ಕೇದಾರನಾಥ ಯಾತ್ರೆ ವೇಳೆ ಮಹಿಳೆ ಅಸ್ವಸ್ಥ: ಸಂಸದ ಶ್ರೇಯಸ್ ಪಟೇಲ್ ನೆರವು

• ಪ್ರಜೋದಯ ವರದಿ

ಹೊಳೆನರಸೀಪುರ: ಕೇದಾರನಾಥ ಯಾತ್ರೆಗೆ ತೆರಳಿದ್ದ ವೇಳೆ ಉಸಿರಾಟ ಸಮಸ್ಯೆಯಿಂದ ಅಸ್ವಸ್ಥಗೊಂಡಿದ್ದ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಮಲ್ಲೇನಹಳ್ಳಿ ಗ್ರಾಮದ ಎಂ.ಎನ್. ನಂದಿನಿ ಅವರನ್ನು ಹೆಲಿಕಾಪ್ಟರ್ ಮೂಲಕ ಸುರಕ್ಷಿತವಾಗಿ ಕರೆತರಲಾಗಿದ್ದು, ಸಂಸದ ಶ್ರೇಯಸ್ ಪಟೇಲ್ ಅವರಿಗೆ ಮಹಿಳೆ ಧನ್ಯವಾದ ಸಲ್ಲಿಸಿದ್ದಾರೆ.

ಹೈಕೋರ್ಟ್‌ನಲ್ಲಿ ವಕೀಲರಾಗಿರುವ ನಂದಿನಿ ಅವರು ಕೇದಾರನಾಥ ಯಾತ್ರೆಯ ಸಂದರ್ಭದಲ್ಲಿ ಮಾರ್ಗ ಮಧ್ಯೆ ಉಸಿರಾಟದ ತೊಂದರೆಗೆ ಒಳಗಾಗಿದ್ದರು. ಈ ಕುರಿತು ಮಾಹಿತಿ ದೊರಕುತ್ತಿದ್ದಂತೆಯೇ ಸಂಸತ್ ಅಧಿಕಾರಿಗಳು ಹಾಗು ರುದ್ರಪ್ರಯಾಗ ಜಿಲ್ಲಾಧಿಕಾರಿ ವಿಶಾಲ್ ಮಿಶ್ರಾ ಅವರನ್ನು ಸಂಪರ್ಕಿಸಿದ ಶ್ರೇಯಸ್ ಪಟೇಲ್ ತ್ವರಿತ ಕ್ರಮಕ್ಕೆ ಸೂಚಿಸಿದ್ದರು. ಸಂಸದರ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ತಕ್ಷಣವೇ ಹೆಲಿಕಾಪ್ಟರ್ ಸುರಕ್ಷಿತ ಸ್ಥಳಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಅರ್ಧ ಗಂಟೆಯಲ್ಲಿ ತ್ವರಿತ ಕ್ರಮ

ಘಟನೆ ಕುರಿತು ಎಂ.ಎನ್. ನಂದಿನಿ ಅವರು ಮಾತನಾಡಿ, ಕೇದಾರನಾಥ ಯಾತ್ರೆಗೆ ಹೋದಾಗ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಭಾವಿಸಿರಲಿಲ್ಲ. ಭಕ್ತರ ಸಂಖ್ಯೆ ವಿಪರೀತವಾಗಿತ್ತು. ಮಳೆ ವಿಪರೀತವಾಗಿದ್ದರಿಂದ ಭಾರೀ ಸಮಸ್ಯೆಯಾಯಿತು. ಸ್ಥಳೀಯ ವೈದ್ಯರು ಆಕ್ಸಿಜನ್‌ಗೆ ನೆರವಾಗಲೆಂದು ಬಾಟಲಿ ಕೊಟ್ಟಿದ್ದರು. ಅದರಿಂದ ಪ್ರಯೋಜನವಾಗದ ಹಿನ್ನಲೆಯಲ್ಲಿ ಸಂಸದ ಶ್ರೇಯಸ್ ಅವರಿಗೆ ಕರೆ ಮಾಡಿದಾಗ ತಕ್ಷಣ ಅವರು ರುದ್ರಪ್ರಯಾಗ ಜಿಲ್ಲಾಧಿ ಕಾರಿ ಅವರನ್ನು ಸಂಪರ್ಕಿಸಿ ಹೆಲಿಕಾಪ್ಟರ್ ವ್ಯವಸ್ಥೆ ಮಾಡಿಸಿದರು. ಕರೆ ಮಾಡಿದ ಅರ್ಧ ಗಂಟೆಯೊಳಗೆ ನಾನು ಸುರಕ್ಷಿತ ಜಾಗ ತಲುಪಿದೆ. ಶ್ರೇಯಸ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿದ್ದಾರೆ.

ಸರ್ಕಾರಿ ಶಾಲೆ ಉಳಿವಿಗಾಗಿ ಬಂದೂರು ಗ್ರಾಮಸ್ಥರ ಒಕ್ಕೊರಲ ಆಗ್ರಹ

• ಪ್ರಜೋದಯ ವರದಿ

ಅರಸೀಕೆರೆ: ಕೆಪಿಎಸ್ ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ತಾಲ್ಲೂಕಿನ ಬಂದೂರು ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢ ಶಾಲೆಯನ್ನು ಜಾವಗಲ್ ಶಾಲೆಯೊಂದಿಗೆ ವಿಲೀನಗೊಳಿಸುವ ನಿರ್ಧಾರದ ವಿರುದ್ಧ ಭಾನುವಾರ ಎಐಡಿಎಸ್‌ಓ ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಿದೆ ಎಂದು ಸುಳ್ಳು ಹೇಳುತ್ತಿರುವ ಸರ್ಕಾರ ಶಾಲೆಗಳನ್ನು ಮುಚ್ಚಿ ಬಡ ಹಾಗು ಗ್ರಾಮೀಣ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂದೂರು ಪ್ರಾಥಮಿಕ ಶಾಲೆಯಲ್ಲಿ 101 ಮತ್ತು ಪ್ರೌಢಶಾಲೆಯಲ್ಲಿ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ದಾಖಲಾತಿ ಉತ್ತಮವಾಗಿದ್ದರೂ ಶಾಲೆಯನ್ನು ಜಾವಗಲ್ ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳಿಸಲು ಹೊರಟಿರುವುದು ಖಂಡನೀಯ. ಸರ್ಕಾರಿ ಶಾಲೆಗಳನ್ನು ಹಂತ ಹಂತವಾಗಿ ದುರ್ಬಲಗೊಳಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ರಾಜ್ಯದ ಜನರು ಸರ್ಕಾರದ ಈ ಹುನ್ನಾರವನ್ನು ಅರಿಯಬೇಕು. ನಮ್ಮ ಗ್ರಾಮಗಳಲ್ಲಿನ ಶಾಲೆ ಉಳಿವಿಗೆ ಪ್ರಯತ್ನಿಸಬೇಕೆಂದು ಒತ್ತಾಯಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ಪ್ರಮುಖ ಶಾಂತಸ್ವಾಮಿ ಅವರು ಮಾತನಾಡಿ, ಬಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿಂದುಳಿದ ವರ್ಗದ ಮಕ್ಕಳು ಇದೇ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ನಾವೆಲ್ಲರೂ ಇದೇ ಶಾಲೆಯಲ್ಲಿ ಓದಿದವರು. ಗ್ರಾಮದಲ್ಲಿ ಶಾಲೆ ಇರುವುದರಿಂದ ಜನರಿಗೆ ಅಗತ್ಯ ದಾಖಲೆಗಳು, ಪ್ರಮಾಣಪತ್ರ ಸೇರಿ ಅನೇಕ ಸರ್ಕಾರಿ ಕಾರ್ಯಗಳು ಸುಲಭವಾಗುತ್ತವೆ. ಶಾಲೆ ಮುಚ್ಚಿದರೆ ಗ್ರಾಮಸ್ಥರು ಸಣ್ಣ ಕೆಲಸಕ್ಕೂ ಅರಸೀಕೆರೆಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ಆತಂಕ ವ್ಯಕ್ತಪಡಿಸಿದರು.

ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಿರೀಶ್ ಅವರು ಮಾತನಾಡಿ, ನಮ್ಮದು ಈ ಪ್ರೌಢಶಾಲೆಯ ಮೊದಲ ಬ್ಯಾಚ್. ಶಾಲೆ ಆರಂಭವಾದ ದಿನದಿಂದ ಇಂದಿನವರೆಗೂ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ.100 ಬಂದಿದೆ. ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ಶಾಲೆಗೆ ಬಣ್ಣ ಹಚ್ಚಿಸಿದ್ದೇವೆ. ಮೂಲ ಸೌಕರ್ಯ ಅಭಿವೃದ್ಧಿಗೆ ಸಹಕಾರ ನೀಡಿದ್ದೇವೆ. ಇಂತಹ ಉತ್ತಮ ಸಾಧನೆ ಮಾಡುತ್ತಿರುವ ಶಾಲೆಯನ್ನು ಮುಚ್ಚಲು ಮುಂದಾಗಿರುವುದು ಖಂಡನೀಯವೆಂದು ಆಕ್ರೋಶ ವ್ಯಕ್ತಪಡಿಸಿದರು. ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಜಿಲ್ಲಾ ಉಪಾಧ್ಯಕ್ಷ ಅಭಿಷೇಕ್, ಗ್ರಾಮಸ್ಥರಾದ ಮೋಹನ್, ಬಸವಲಿಂಗೇಗೌಡ, ಪವನ್, ಮಂಜೇಗೌಡ, ದೇವರಾಜು, ಸುನಿಲ್, ರೇಣುಕ ಪ್ರಸಾದ್, ಶಾಂತಸ್ವಾಮಿ ಇತರರಿದ್ದರು.

ಒಗ್ಗಟ್ಟಿನ ಸಂದೇಶ ಸಾರಿದ ಕಾಂಗ್ರೆಸ್ ನಾಯಕರು

ಮುಂಬರುವ ಚುನಾವಣೆಗೆ ಗೋಪಾಲಸ್ವಾಮಿ ನಾಯಕತ್ವ | ಜಿ.ಪಂ.-ತಾ.ಪಂ.ಗೆಲುವಿನತ್ತ ಚಿತ್ತ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ವರಿಷ್ಠರು ಆಸಕ್ತಿ ತೋರುತ್ತಿಲ್ಲವೆಂದು ಅಸಮಾಧಾನ ಹೊರ ಹಾಕಿದ್ದ ಕಾಂಗ್ರೆಸ್ ಮುಖಂಡರು ಮತ್ತೆ ಸಭೆ ನಡೆಸಿದ್ದು, ಮುಂಬರುವ ಚುನಾವಣೆ ತಯಾರಿಗೆ ಒಮ್ಮತದ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಕಳೆದ ಕೆಲವು ತಿಂಗಳ ಹಿಂದೆ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡರ ನಿವಾಸದಲ್ಲಿ ಸಭೆ ಸೇರಿದ್ದ ಮುಖಂಡರು ಸಂಸದ ಶ್ರೇಯಸ್ ಪಟೇಲ್, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗು ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡರ ವಿರುದ್ಧ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿದ್ದರು. ಕೇವಲ ಗ್ಯಾರಂಟಿ ಹೆಸರಿನಿಂದ ಮತ ಕೇಳಲು ಹೋದರೆ ಪ್ರಯೋಜನವಾಗುವುದಿಲ್ಲ. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಈಗಾಗಲೇ ಗ್ರಾಮಗಳಿಗೆ ಭೇಟಿ ನೀಡಿ ಮತದಾರರ ಸೆಳೆಯಲು ಎಲ್ಲಾ ಪ್ರಯತ್ನ ಮಾಡುತ್ತಿದ್ದಾರೆಂದು ಬಹುತೇಕ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಆ ಮೂಲಕ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಸಾಬೀತಾಗಿತ್ತು. ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಮುಖಂಡ ದಿ.ಹೆಚ್.ಸಿ.ಶ್ರೀಕಂಠಯ್ಯ ಅವರ ಪುತ್ರ ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ಎಸ್. ವಿಜಯಕುಮಾರ್ ಅವರ ನಿವಾಸದಲ್ಲಿ ಇತ್ತೀಚೆಗೆ ಸಭೆ ಸೇರಿ ಚರ್ಚಿಸಿದ್ದಾರೆ.

ಎಂ.ಎ.ಗೋಪಾಲಸ್ವಾಮಿ ನೇತೃತ್ವ

ಹೇಮಾವತಿ ಸಕ್ಕರೆ ಕಾರ್ಖಾನೆ ಚುನಾವಣೆ, ಮುಂಬರುವ ಗ್ರಾಮ, ತಾಲ್ಲೂಕು ಹಾಗು ಜಿಲ್ಲಾ ಪಂಚಾಯಿತಿ ಚುನಾವಣೆ ಸಮೀಪಿಸುತ್ತಿದ್ದು, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ ಗೋಪಾಲಸ್ವಾಮಿ ನಾಯಕತ್ವದಲ್ಲಿ ನಡೆಯಲಿ ಎಂಬುದು ಮುಖಂಡರ ಅಭಿಪ್ರಾಯವಾಗಿದೆ. ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷ ಸಂಘಟಿಸಬೇಕು. ಅದರ ನೇತೃತ್ವವನ್ನು ಗೋಪಾಲಸ್ವಾಮಿ ಅವರೇ ವಹಿಸಲಿ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ ಎನ್ನಲಾಗಿದೆ.

ತಾಲ್ಲೂಕಿನಲ್ಲಿ ಪಕ್ಷದ ಬಲವರ್ಧನೆಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗು ಪದಾಧಿಕಾರಿಗಳು ಒತ್ತು ನೀಡಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕರನ್ನು ಆಯ್ಕೆ ಮಾಡಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸೋಣ ಎಂಬ ತೀರ್ಮಾನಕ್ಕೆ ಬರಲಾಯಿತು. ಜೊತೆಗೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಬೂತ್ ಮಟ್ಟದಲ್ಲಿ ಹಣ ಸಂಗ್ರಹಿಸುವ ಮೂಲಕ ಅತಿ ಜರೂರಾಗಿ ಭವನ ನಿರ್ಮಿಸಲು ಮುಖಂಡರ ಸಭೆ ನಡೆಸುವುದಾಗಿ ತಿಳಿಸಿದ್ದಾರೆ.

ಸಭೆಯಲ್ಲಿ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ಸೂಚಿಸಿದ್ದಾರೆ. 2028ರ ವಿಧಾನಸಭೆ ಚುನಾವಣೆಯಲ್ಲಿ ಶ್ರವಣ ಬೆಳಗೊಳ ಕ್ಷೇತ್ರ ಕಾಂಗ್ರೆಸ್ ವಶವಾಗಬೇಕೆಂದರೆ ಮುಂಬರುವ ಜಿಲ್ಲಾ ಹಾಗು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಬೇಕು. ಅದಕ್ಕಾಗಿ ಕಾರ್ಯಕರ್ತರು ಈಗಿನಿಂದಲೇ ಶ್ರಮ ವಹಿಸಬೇಕೆಂದರು.

ವೈಯಕ್ತಿಕ ಹಿತಾಸಕ್ತಿ ಬದಿಗಿಟ್ಟು ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿದರೆ ಮಾತ್ರ ಗೆಲುವು ಸಾಧ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನಾಯಕತ್ವದಲ್ಲಿ 5 ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ತಾಲ್ಲೂಕು ಕೇಂದ್ರದಲ್ಲಿ ಸುಮಾರು 1 ಕೋ.ರೂ. ವೆಚ್ಚದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು, ಭವನ ನಿರ್ಮಾಣಕ್ಕೆ ಹೆಚ್ಚಿನ ಸಹಕಾರ ನೀಡುವಂತೆ ಮನವಿ ಮಾಡಿದರು ಎಂದು ತಿಳಿದುಬಂದಿದೆ.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಎಂ.ರಾಮಚಂದ್ರು, ಎಂ.ಕೆ.ಮಂಜೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ. ಶಂಕರ್, ಉದಯ್ ಕುಮಾರ್ ಮೊದಲಾದವರಿದ್ದರು.

ಜೆಡಿಎಸ್‌ನಿಂದಲೂ ಪಕ್ಷ ಬಲವರ್ಧನೆಗೆ ಒತ್ತು

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರವನ್ನು ಬಿಟ್ಟುಕೊಡಬಾರದೆಂದು ಪಣ ತೊಟ್ಟಿರುವ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸಹ ತಮ್ಮದೇಯಾದ ಕಾರ್ಯತಂತ್ರ ಹೆಣೆಯುತ್ತಿದ್ದಾರೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಮೂರು ವರ್ಷ ಸರ್ಕಾರದ ಆಡಳಿತದಿಂದ ರಾಜ್ಯಾದ್ಯಂತ ಕಾಂಗ್ರೆಸ್‌ಗೆ ಉತ್ತಮ ವಾತಾವರಣ ಇದೆ. ಜೆಡಿಎಸ್ ಅಸ್ತಿತ್ವ ಉಳಿಸಿಕೊಳ್ಳಬೇಕೆಂದರೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆಲುವು ಮುಖ್ಯವಾಗಿದೆ. ಆ ಹಿನ್ನಲೆಯಲ್ಲಿ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ನಾಯಕರನ್ನು ಹೆಚ್.ಡಿ.ರೇವಣ್ಣ ಅವರು ಭೇಟಿಯಾಗಿ ಮನವೊಲಿಸುತ್ತಿದ್ದಾರೆ. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಪದೇ ಪದೇ ಜಿಲ್ಲೆಗೆ ಆಹ್ವಾನಿಸುತ್ತಿರುವುದು ಯುವ ಮತದಾರರ ಸೆಳೆಯುವ ಭಾಗವಾಗಿದೆ. ಇತ್ತೀಚೆಗೆ ಚನ್ನರಾಯಪಟ್ಟಣಕ್ಕೆ ಭೇಟಿ ನೀಡಿದ್ದ ನಿಖಿಲ್ ಕುಮಾರಸ್ವಾಮಿ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ನೀಡಿದ್ದ ಹೇಳಿಕೆಗಳು ಚರ್ಚೆ ಹುಟ್ಟು ಹಾಕಿವೆ. ಇತ್ತೀಚಿನ ಕಹಿ ಘಟನೆಗಳಿಂದ ಮಂಕಾಗಿರುವ ಜೆಡಿಎಸ್‌ಗೆ ನಿಖಿಲ್‌ಕುಮಾರಸ್ವಾಮಿ ಪರ್ಯಾಯವಾಗಿ ಗುರುತಿಸಿಕೊಳ್ಳಲಿದ್ದಾರೆಂಬ ಚಿಂತನೆ ನಡೆಯುತ್ತಿವೆ.

ಡಾ. ಅಮೂಲ್ಯ ಅಂಗಡಿಗೆ 195ನೇ ರ್‍ಯಾಂಕ್

• ಪ್ರಜೋದಯ ವರದಿ

ಹಾಸನ: ಆಕಾಶವಾಣಿ ನಿವೃತ್ತ ಅಧಿಕಾರಿ ಹಾಗು ಲೇಖಕ ಡಾ. ವಿಜಯ ಅಂಗಡಿ, ಕೆ.ಎಂ.ಮಂಜುಳಾ ಅವರ ಪುತ್ರಿ ಡಾ. ಅಮೂಲ್ಯ ಅಂಗಡಿ ರಾಷ್ಟ್ರೀಯ ಮಟ್ಟದ ಏಮ್ಸ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿ 195ನೇ ರ್‍ಯಾಂಕ್ ಪಡೆದಿದ್ದಾರೆ.

ಶಿವಮೊಗ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎಂಬಿ ಬಿಎಸ್ ಪದವಿ ಪೂರ್ಣಗೊಳಿಸಿರುವ ಡಾ. ಅಮೂಲ್ಯ ಅವರು ದೇಶದ ಪ್ರತಿಷ್ಠಿತ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಎಂ.ಡಿ. ಸ್ನಾತಕೋತ್ತರ ವೈದ್ಯಕೀಯ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ನಡೆದ ರಾಷ್ಟ್ರೀಯ ಮಟ್ಟದ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ. ದೇಶಾದ್ಯಂತ ಇರುವ ಸುಮಾರು 20 ಏಮ್ಸ್ ಸಂಸ್ಥೆಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮುಂದುವರಿಸಲು ಅವರಿಗೆ ಅವಕಾಶ ಲಭ್ಯವಾಗಲಿದೆ. ಬೆಂಗಳೂರು ಮೂಲದ ಡಾ.ಭಾಟಿಯ ಕೋಚಿಂಗ್ ಕೇಂದ್ರದ ತರಬೇತಿ ಪಡೆದ ಅವರು ಶಿಸ್ತುಬದ್ಧ ಅಭ್ಯಾಸ ಹಾಗು ಪರಿಶ್ರಮದ ಮೂಲಕ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 8.05 ಕೋ.ರೂ.

• ಪ್ರಜೋದಯ ವರದಿ

ನುಗ್ಗೇಹಳ್ಳಿ: ರಾಜ್ಯದಲ್ಲಿ ಹೈನುಗಾರಿಕೆ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪ್ರಸ್ತುತ ಸಾಲಿನಲ್ಲಿ 511 ಕಾಮಗಾರಿಗೆ 8.05 ಕೋಟಿ ರೂ. ನೀಡಲಾಗಿದೆ ಎಂದು ಯೋಜನೆ ಜಿಲ್ಲಾ ನಿರ್ದೇಶಕಿ ಲೀಲಾವತಿ ಅವರು ತಿಳಿಸಿದರು.

ಶ್ರವಣಬೆಳಗೊಳ ಯೋಜನಾ ಕಚೇರಿ ವ್ಯಾಪ್ತಿಯ ಕಲ್ಕೆರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕಾಗಿ 2 ಲಕ್ಷ ರೂ. ಸಹಾಯಧನದ ಡಿಡಿಯನ್ನು ಸಂಘದ ಆಡಳಿತ ಮಂಡಳಿಗೆ ಹಸ್ತಾಂತರಿಸಿ ಮಾತನಾಡಿದ ಅವರು, ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವು ವರ್ಷಗಳಿಂದ ರಾಜ್ಯದ ಹೈನುಗಾರಿಕೆ ಬಲವರ್ಧನೆಗೆ ಡಾ. ಡಿ. ವೀರೇಂದ್ರ ಹೆಗಡೆ ಅವರ ಮಾರ್ಗದರ್ಶನದಲ್ಲಿ ಡೈರಿ ಕಟ್ಟಡ ನಿರ್ಮಾಣಕ್ಕೆ 1.50 ಲಕ್ಷದಿಂದ 3 ಲಕ್ಷ ರೂ. ವರೆಗೆ ಸಹಾಯಧನ ನೀಡಲಾಗುತ್ತಿದೆ ಎಂದು ಹೇಳಿದರು.

ಹೈನುಗಾರಿಕೆ, ಶಿಕ್ಷಣ, ಕೆರೆ ಅಭಿವೃದ್ಧಿ, ಕೃಷಿ ಸೇರಿದಂತೆ ಅನೇಕ ಕ್ಷೇತ್ರಗಳ ಪ್ರಗತಿಗಾಗಿ ಪ್ರತಿವರ್ಷವೂ ಅನುದಾನ ನೀಡಲಾಗುತ್ತಿದೆ. ಕೃಷಿ ಯಂತ್ರಧಾರೆಯ ಮೂಲಕ ರೈತರಿಗೆ ಕಡಿಮೆ ದರದಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೌಲಭ್ಯ ಒದಗಿಸಲಾಗುತ್ತಿದೆ. ಯೋಜನೆಯ ಸಹಾಯ ಸಂಘಗಳ ಸದಸ್ಯರ ಮಕ್ಕಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಶಿಷ್ಯವೇತನ, ವಯೋವೃದ್ಧ ಹಾಗು ಅಬಲರಿಗೆ ಮಾಸಾಶನ, ಮನೆ ಇಲ್ಲದವರಿಗೆ ಮನೆ ನಿರ್ಮಾಣ ಸೇರಿ ಹಲವು ಸಮಾಜಮುಖಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಕಲ್ಕೆರೆ ಹಾಲು ಉತ್ಪಾದಕರ ಮಹಿಳಾ ಸಂಘದ ಅಧ್ಯಕ್ಷೆ ಸಾವಿತ್ರಮ್ಮ ರಮೇಶ್ ಅವರು ಮಾತನಾಡಿ, ಡೈರಿ ಕಟ್ಟಡ ನಿರ್ಮಾಣಕ್ಕೆ 2 ಲಕ್ಷ ರೂ. ಸಹಾಯಧನ ನೀಡಿರುವ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರವಣಬೆಳಗೊಳ ಯೋಜನಾಧಿಕಾರಿ ಕೆ. ಪುರಂದರ, ಸಂಘದ ಅಧ್ಯಕ್ಷೆ ಮಂಜುಳಾ ತಿಮ್ಮೇಗೌಡ, ಸಾವಯವ ಕೃಷಿಕ ಗಣೇಶ್, ಕಲ್ಕೆರೆ ವಲಯದ ಮೇಲ್ವಿಚಾರಕ ರಮೇಶ್, ಕೃಷಿ ಮೇಲ್ವಿಚಾರಕ ಲಿಂಗರಾಜು, ಸೇವಾ ಪ್ರತಿನಿಧಿ ಮಂಜೇಗೌಡ ಮತ್ತಿತರರಿದ್ದರು.



ಗ್ರಾಮೀಣ ಭಾಗದಲ್ಲಿ ಭಾರೀ ತೊಂದರೆ | ಪೆಟ್ರೋಲ್-ಡೀಸೆಲ್ ಮಿತಿಗೆ ಆಕ್ರೋಶ

ಕೃಷಿ ಚಟುವಟಿಕೆಗೂ ಅಡ್ಡಿಯಾದ ಇಂಧನ ಬಿಕ್ಕಟ್ಟು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

ಹಾಸನ: ಪಶ್ಚಿಮ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಣಾಮ ಪೆಟ್ರೋಲ್-ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಕೃಷಿ ಚಟುವಟಿಕೆಗೂ ಬಿಕ್ಕಟ್ಟಿನ ಬಿಸಿ ತಟ್ಟುತ್ತಿದೆ.

ಜಿಲ್ಲೆಯ ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯಾನ್‌ಗಳಲ್ಲಿ ಪೆಟ್ರೋಲ್-ಡೀಸೆಲ್ ಕೊಡುವುದನ್ನು ಸ್ಥಗಿತಗೊಳಿಸಿರುವುದರಿಂದ ಜಮೀನು ಕೆಲಸ ಮಾಡುತ್ತಿದ್ದ ಯಂತ್ರಗಳು ಸ್ಥಗಿತಗೊಂಡಿವೆ. ಹತ್ತಾರು ಕಿ.ಮೀ. ದೂರದವರೆಗೆ ಯಂತ್ರಗಳನ್ನೇ ತಂದು ಇಂಧನ ತುಂಬಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಕ್ಯಾನ್‌ಗಳಲ್ಲಿ ಪೆಟ್ರೋಲ್-ಡೀಸೆಲ್ ನೀಡದಂತೆ ಆದೇಶವಾಗಿ 10 ದಿನ ಕಳೆದಿದ್ದರೂ ಈವರೆಗೆ ಅಷ್ಟಾಗಿ ಪಾಲನೆಯಾಗುತ್ತಿರಲಿಲ್ಲ. ಆದರೆ, ಕಳೆದ ಎರಡು ದಿನಗಳಿಂದ ಕಾನೂನು ಕಠಿಣಗೊಳಿಸಲಾಗಿದೆ. ಹೀಗಾಗಿ ಗ್ರಾಮೀಣ ಭಾಗದ ಪೆಟ್ರೋಲ್ ಬಂಕ್‌ಗಳಲ್ಲಿ ರೈತರು-ಬಂಕ್ ಸಿಬ್ಬಂದಿ ಮಧ್ಯೆ ವಾಗ್ವಾದ ನಡೆಯುತ್ತಿದೆ. ಮೊದಲೆಲ್ಲಾ ಲೋಡ್ ನಿಯಮಿತವಾಗಿ ಬರುತ್ತಿತ್ತು. ಈಗ ನಾಲ್ಕೈದು ದಿನ ತಡವಾಗುತ್ತಿದೆ.

ಮುಂದೆ ಪೆಟ್ರೋಲ್ ಸಿಗುವುದೇ ಕಷ್ಟ ಎನ್ನುವಂತಾಗಿದೆ. ಇಂತಹ ಸಂದರ್ಭದಲ್ಲಿ ಜಿಲ್ಲಾಡಳಿತದ ಆದೇಶ ಪಾಲಿಸಬೇಕಲ್ಲವೇ ಎಂದು ಪೆಟ್ರೋಲ್ ಬಂಕ್ ಸಿಬ್ಬಂದಿ ಹೇಳುತ್ತಾರೆ. ಆದರೆ, ಕೃಷಿ ಕೆಲಸಗಳಿಗೂ ಅಡ್ಡಿಪಡಿಸುವುದು ಎಷ್ಟು ಸರಿ ಎಂದು ರೈತರು ಗೋಳಾಡುತ್ತಿದ್ದಾರೆ.

ಕೃಷಿ ಹಾಗು ತೋಟಗಾರಿಕೆ ಕೆಲಸಕ್ಕೆ ರೈತರು ವೀಡ್ ಕಟ್ಟರ್, ಟ್ರ್ಯಾಕ್ಟರ್, ಟಿಲ್ಲರ್, ಸ್ಪ್ರೇಯರ್ ಮೊದಲಾದ ಯಂತ್ರಗಳನ್ನು ಬಳಸುತ್ತಾರೆ. ಅವುಗಳು ಕಾರ್ಯನಿರ್ವಹಿಸಬೇಕೆಂದರೆ ಪೆಟ್ರೋಲ್ ಅಥವಾ ಡೀಸೆಲ್ ಅತ್ಯಗತ್ಯ. ಇಂಧನ ಖಾಲಿಯಾದಾಗ ರೈತರು ಕ್ಯಾನ್‌ಗಳೊಂದಿಗೆ ಬೈಕ್‌ನಲ್ಲಿ ಬಂಕ್‌ಗೆ ಬರುವುದು ಸಾಮಾನ್ಯವಾಗಿತ್ತು. ಇದರಿಂದ ಅವರ ಕೆಲಸಕ್ಕೆ ಅನುಕೂಲವಾಗುತ್ತಿತ್ತು. ಆದರೆ ಈಗ ಸಾಧನಗಳನ್ನೇ ಬಂಕ್‌ಗೆ ತರಬೇಕಾಗಿದ್ದು ಅವೈಜ್ಞಾನಿಕ ನಿಯಮ ಎಂಬುದು ರೈತರ ಅಂಬೋಣ.

200 ಲೀಟರ್ ಡೀಸೆಲ್ ನಿಗದಿ

ಒಂದು ವಾಹನಕ್ಕೆ 200 ಲೀಟರ್ ಮಾತ್ರ ಡೀಸೆಲ್ ಹಾಗು 50 ಲೀ. ಪೆಟ್ರೋಲ್ ಮಾರಾಟ ಮಾಡಲಾಗುತ್ತಿದೆ. ಮೊದಲು ಎಷ್ಟು ಬೇಕಾದರೂ ಕೊಡುತ್ತಿದ್ದರು. ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಳ್ಳುತ್ತಾರೆಂಬ ಕಾರಣಕ್ಕೆ ಮಿತಿ ನಿಗದಿಗೊಳಿಸಲಾಗಿದೆ. ಈ ಹಿಂದೆ ಆಯಿಲ್ ಕಂಪನಿಯವರು ಸಾಲದ ರೂಪದಲ್ಲಿ ಪೆಟ್ರೋಲ್-ಡೀಸೆಲ್ ಸರಬರಾಜು ಮಾಡುತ್ತಿದ್ದರು. ಪ್ರಸ್ತುತ ಆ ವ್ಯವಸ್ಥೆಗೆ ಕಡಿವಾಣ ಹಾಕಲಾಗಿದೆ. ಜಿಲ್ಲೆಯಲ್ಲಿ ಒಟ್ಟು 226 ಪೆಟ್ರೋಲ್ ಬಂಕ್‌ಗಳಿದ್ದು ನಿತ್ಯ ಅಂದಾಜು 2 ಲಕ್ಷ ಲೀಟರ್ ಇಂಧನ ಮಾರಾಟ ವಾಗುತ್ತದೆ ಎನ್ನಲಾಗಿದೆ. ಬಿಪಿಸಿಎಲ್ 39, ಹೆಚ್‌ಪಿಸಿಎಲ್ 67, ಐಒಸಿಎಲ್ 79, ಎಂಆರ್‌ಪಿಎಲ್ 4, ನಯಾರಾ 33 ಹಾಗು ರಿಲಯನ್ಸ್ ಕಂಪನಿಯ 4 ಬಂಕ್‌ಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ರೈತರಿಗೆ ನೆರವಾಗಲು ಆಗ್ರಹ

ಟಿಲ್ಲರ್ ಅಥವಾ ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮೊದಲಾದ ಕೃಷಿ ಕೆಲಸ ಮಾಡುವವರು ಜಮೀನಿನಿಂದ ಜಮೀನಿಗೆ ಹೋಗುತ್ತಾರೆ. ಮಾರ್ಗಮಧ್ಯೆ ಡೀಸೆಲ್ ಖಾಲಿಯಾದರೆ ಅವರು ಚಾಲಕ ಮಾಲೀಕರಿಗೆ ಕರೆ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕ್ಯಾನ್‌ಗಳಲ್ಲಿ ತುಂಬಿಸಿಕೊಂಡು ಬರಲು ಬಂಕ್‌ಗೆ ಹೋದರೆ ಇಂಧನ ಕೊಡುವುದಿಲ್ಲ. ದಾರಿಯಲ್ಲೇ ನಿಂತ ಟ್ರ್ಯಾಕ್ಟರ್ ಅನ್ನು ತರುವುದಾದರೂ ಹೇಗೆ. ಸರ್ಕಾರ ಇಂತಹ ಸೂಕ್ಷ್ಮ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಕೃಷಿ ಕೆಲಸಗಳಿಗೂ ತೊಂದರೆ ನೀಡಿದರೆ ಹೇಗೆ ಎಂದು ರೈತರು ಪ್ರಶ್ನಿಸಿದ್ದಾರೆ.

"ಇಂಧನ ಸರಬರಾಜು ಪ್ರಕ್ರಿಯೆಯಲ್ಲಿ ಭಾರೀ ತೊಂದರೆಯಾಗುತ್ತಿದೆ. ಪರಿಸ್ಥಿತಿ ಮೊದಲಿನ ಹಾಗೆ ಸಹಜ ಸ್ಥಿತಿಗೆ ಬರಬೇಕೆಂದರೆ ಸಮಯ ಬೇಕಾಗುತ್ತದೆ. ಜಿಲ್ಲಾಧಿಕಾರಿ ನಿರ್ದೇಶನ ಹಿನ್ನಲೆಯಲ್ಲಿ ಕ್ಯಾನ್‌ಗಳಿಗೆ ಇಂಧನ ಕೊಡುತ್ತಿಲ್ಲ. ಹೀಗಾಗಿ ಸಾರ್ವಜನಿಕರು ವಾಗ್ವಾದ ಮಾಡುತ್ತಾರೆ.

-ಉಮೇಶ್, ಪೆಟ್ರೋಲ್ ಬಂಕ್ ಮಾಲೀಕ ಹಾಸನ

ತಕ್ಷಣಕ್ಕೆ ಇಂಧನ ಸಿಗುತ್ತಿಲ್ಲ

ಮೊದಲಿಗೆ ಹೋಲಿಸಿದರೆ ಈಗ ಇಂಧನ ಪೂರೈಕೆಯಲ್ಲಿ ಭಾರೀ ವ್ಯತ್ಯಯವಾಗಿದೆ. ಇಂಡೆಂಟ್ ಹಾಕಿದ ದಿನವೇ ಎಷ್ಟು ಲೋಡ್ ಬೇಕಾದರೂ ಬಂಕ್‌ಗಳಿಗೆ ಬರುತ್ತಿತ್ತು. ಈಗ ಮೂರರಿಂದ ನಾಲ್ಕು ದಿನ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ಕಡಿಮೆ ಪ್ರಮಾಣದಲ್ಲಿ ಪೆಟ್ರೋಲ್-ಡೀಸೆಲ್ ಮಾರಾಟ ಮಾಡಿ ಬಂಕ್ ಬಂದ್ ಆಗದಂತೆ ನೋಡಿಕೊಳ್ಳುತ್ತಿದ್ದೇವೆ. ಬಹುಶಃ ವಾರದ ಬಳಿಕ ನಾವು ಬಂಕ್ ಬಂದ್ ಮಾಡುವ ಪರಿಸ್ಥಿತಿ ನಿರ್ಮಾಣವಾಗಬಹುದೆಂದು ಸಿಬ್ಬಂದಿಯೊಬ್ಬರು ಅಭಿಪ್ರಾಯಪಟ್ಟರು.

ಒಂದು ಕಪ್ ಚಹಾದ ಕತೆ

ಪ್ರತಿಯೊಬ್ಬರ ದೈನಂದಿನ ಬದುಕಿನಲ್ಲಿ ಚಹಾ ಮಹತ್ವದ ಸ್ಥಾನವನ್ನು ಪಡೆದಿದೆ. ಅನೇಕರ ದಿನಚರಿ ಆರಂಭವಾಗುವುದೇ ಒಂದು ಕಪ್ ಬಿಸಿ ಬಿಸಿ ಚಹಾದೊಂದಿಗೆ ಎಂದರೆ ತಪ್ಪಾಗಲಾರದು. ಒಂದು ಕಪ್ ಚಹಾ ಕ್ಷಣಾರ್ಧದಲ್ಲಿ ಮನಸ್ಸನ್ನು ಹಗುರಗೊಳಿಸಬಹುದು ಎಂಬುದು ಎಷ್ಟು ಸತ್ಯವೋ, ಅಷ್ಟೇ ಸುಂದರವಾದ ಸಂಗತಿ. ಇದೇ ಒಂದು ಕಪ್ ಚಹಾದಲ್ಲಿ ಅದೆಷ್ಟು ಮಾತುಕತೆಗಳು ನಡೆಯುತ್ತವೆ ಎಂಬುದು ಕೆಲವೊಮ್ಮೆ ಆಶ್ಚರ್ಯ ಉಂಟು ಮಾಡುತ್ತದೆ. ಮನೆಗೆ ಅತಿಥಿಗಳು ಬಂದಾಗ ಮೊದಲು ನೀಡುವುದೇ ಚಹಾ. ಬಿಸಿ ಚಹಾ ನಿಧಾನವಾಗಿ ಕುಡಿಯುತ್ತಿದ್ದಂತೆ, ಸಂಬಂಧಗಳೂ ನಿಧಾನವಾಗಿ ಗಾಢವಾಗುತ್ತಾ ಹೋಗುತ್ತದೆ. ಬೆಳಗಿನ ಮಾತುಕತೆಗಳಿಂದ ಹಿಡಿದು ರಾತ್ರಿಯ ನೀರವ ಮೌನ ಚಿಂತನೆಗಳಲ್ಲಿ ಚಹಾ ನಮ್ಮ ನಿಶ್ಶಬ್ದ ಸಂಗಾತಿಯಾಗಿರುತ್ತದೆ. ಚಹಾ ಕುಡಿದಾಗ, ಮನಸ್ಸಿನ ಚಿಂತೆ ದೂರವಾಗಿ, ದೇಹದ ದಣಿವೂ ಮಾಯವಾಗಿ ನವ ಚೈತನ್ಯ ಮೂಡುವುದು. ತಲೆನೋವಿದ್ದಾಗ ಒಂದು ಕಪ್ ಸ್ಟ್ರಾಂಗ್ ಟೀ ಕುಡಿದರೆ ಸಾಕು. ತಕ್ಷಣ ಮಾಯ. ದೂರವಾದ ಸಂಬಂಧಗಳನ್ನು ಮತ್ತೆ ಜೋಡಿಸುವ ಶಕ್ತಿ ಈ ಚಹಾಕ್ಕೆ ಇದೆ. ಮರೆಯಲಾಗದ ನೆನಪುಗಳನ್ನು ಸೃಷ್ಟಿಸುವ ಸಾಮರ್ಥ್ಯವೂ ಇದೆ. ನೋವು, ನಗು. ಮೌನ, ಖಿನ್ನತೆ ಹಾಗೂ ಏಕಾಂತದಲ್ಲಿ ಚಹಾ ನಮ್ಮ ಅತ್ಯುತ್ತಮ ಸಂಗಾತಿ. ಕುದಿಯುತ್ತಿರುವ ಚಹಾದ ಸುವಾಸನೆ ಹಳೆಯ ನೆನಪುಗಳನ್ನು ಜ್ಞಾಪಿಸುತ್ತದೆ. ಅನೇಕ ಕವಿಗಳು, ಲೇಖಕರು ತಮ್ಮ ಕೃತಿಯಲ್ಲಿ ಚಹಾವನ್ನು ಸ್ನೇಹ, ಪ್ರೀತಿ ಹಾಗೂ ನೆನಪಿನ ಸಂಕೇತವಾಗಿರಿಸಿದ್ದಾರೆ. ಅಲ್ಲದೆ ಜಿಟಿ ಜಿಟಿ ಮಳೆ, ಬಿಸಿ ಬಿಸಿ ಚಹಾ, ರಾತ್ರಿಯ ನೀರವತೆ, ಏಕಾಂತತೆ ಇವೆಲ್ಲವೂ ಚಹಾದ ಮಹತ್ವವನ್ನು ಸಾರುತ್ತದೆ.

ಚಹಾದ ಮೂಲವು ಸಾವಿರಾರು ವರ್ಷಗಳ ಹಿಂದೆ ಚೈನಾ ದೇಶದಲ್ಲಿ ಆರಂಭವಾಯಿತೆಂದು ಓದಿದ ನೆನಪು. ಒಂದು ಕಾಲದಲ್ಲಿ ಔಷಧ ರೂಪದಲ್ಲಿ ಬಳಸಲಾಗುತ್ತಿದ್ದ ಈ ಪಾನೀಯವು ಮುಂದೆ ನಿಧಾನವಾಗಿ ದಿನನಿತ್ಯದ ಪೇಯವಾಗಿ ಜನಪ್ರಿಯವಾಯಿತೆಂದು ನಂಬಲಾಗುತ್ತಿದೆ. ಭಾರತದಲ್ಲಿ ಅಸ್ಸಾಂ ಮತ್ತು ಡಾರ್ಜಲಿಂಗ್ ಪ್ರದೇಶಗಳಲ್ಲಿ ಹೆಚ್ಚಾಗಿ ಚಹಾ ತೋಟಗಳನ್ನು ಕಾಣಬಹುದು ಭಾರತದ ಆರ್ಥಿಕತೆಯಲ್ಲೂ ಪ್ರಮುಖ ಪಾತ್ರ ವಹಿಸಿರುವ ಭಾರತೀಯ ಚಹಾ ಪ್ರಪಂಚದಾದ್ಯಂತ ಪ್ರಸಿದ್ಧಿ ಪಡೆದಿದೆ.

ಬಹಳಷ್ಟು ಜನರಿಗೆ ಬೆಳಗ್ಗಿನ ಹೊತ್ತು ಪತ್ರಿಕೆಯ ಜೊತೆಗೆ ಒಂದು ಕಪ್ ಚಹಾ ಖುಷಿಯ ಕ್ಷಣಗಳಲ್ಲೊಂದು. ತುಸು ಚಹಾ ಸಿಕ್ಕರೆ ಸಾಕು, ದಿನವಿಡೀ ಚೈತನ್ಯದ ಚಿಲುಮೆಯಾಗುತ್ತಾರೆ. ಬೆಳಿಗ್ಗೆ ಎದ್ದ ಕೂಡಲೇ, ಊಟ, ತಿಂಡಿ ಮುಗಿದ ಬಳಿಕ ಟೀ ಕುಡಿಯುವ ಅಭ್ಯಾಸ ಅನೇಕರಿಗಿರುತ್ತದೆ. ಕೆಲವರಂತೂ ಕೆಲಸ ಮಾಡುವಾಗ ಆಗಾಗ್ಗೆ ಟೀ ಬ್ರೇಕ್ ತೆಗೆದುಕೊಳ್ಳುತ್ತಲೇ ಇರುತ್ತಾರೆ. ದಕ್ಷಿಣ ಭಾರತದಲ್ಲಿ ಸಾಮಾನ್ಯ ಟೀ ಹೆಚ್ಚು ಪ್ರಚಲಿತದಲ್ಲಿದ್ದರೆ, ಉತ್ತರ ಭಾರತದಲ್ಲಿ ಶುಂಠಿ, ಮಸಲಾ ಚಹಾಕ್ಕೆ ಅತ್ಯಂತ ಬೇಡಿಕೆ ಇದೆ. ಅಲ್ಲಿನ ಜನರು ಮಸಾಲ ಟೀಯನ್ನು ಹೆಚ್ಚು ಇಷ್ಟ ಪಡುತ್ತಾರೆ. ನಾನು ಮೊದಲ ಬಾರಿ ಶುಂಠಿ ಚಹವನ್ನು ಸವಿದದ್ದು, ಡೆಲ್ಲಿಯಲ್ಲಿ. ಮಗಳ ಮದುವೆಯ ಸಮಯದಲ್ಲಿ ಜಿಂಜರ್ ಟಿ ಕುಡಿಯುವ ಸುಯೋಗ ದೊರಕಿತ್ತು. ಮೊದಲು ಸ್ವಲ್ಪ ಖಾರ ಅನಿಸಿದರೂ ರುಚಿಯಾಗಿತ್ತು. ಅದರ ಸವಿಯೇ ವಿಭಿನ್ನ.

ಚಾಯ್ ಪೇ ಚರ್ಚಾ ಎಂಬ ಘೋಷ ವಾಕ್ಯವು ಚಹಾಕ್ಕೆ ಹೊಸ ಅರ್ಥವನ್ನೇ ನೀಡಿತಲ್ಲದೇ, ಚಹಾದ ಜೊತೆ ನಡೆಯುವ ಮಾತುಕತೆ, ಸಭೆಗಳು, ಸಂಭಾಷಣೆಗಳು ಅನೇಕ ಹೊಸ ಆಲೋಚನೆಗಳಿಗೆ, ವಿಚಾರಗಳಿಗೆ ಮುಕ್ತ ವೇದಿಕೆಯನ್ನು ಒದಗಿಸಿಕೊಟ್ಟಿತು. ಯುವಕರು ತಮ್ಮ ಕನಸುಗಳು ಮತ್ತು ಅಭಿವೃದ್ಧಿಯ ವಿಚಾರಗಳನ್ನು ಎಲ್ಲರ ಜತೆಗೂಡಿ, ಚಹಾದೊಂದಿಗೆ ಒಂದೆಡೆ



ಕುಳಿತು ಮುಕ್ತವಾಗಿ ಚರ್ಚಿಸುವ ಈ ಪರಿಕಲ್ಪನೆ ಬಹಳಷ್ಟು ಜನಪ್ರಿಯತೆಯನ್ನು ಪಡೆಯಿತು. ಚಾ ಎಂಬುದು ಕೇವಲ ಮನೆಯಲ್ಲಿ ಕುಡಿಯುವ ಪಾನೀಯವಲ್ಲದೆ, ಬೇರೆ ಬೇರೆ ಪ್ರದೇಶದ ಜನರನ್ನು ಒಗ್ಗೂಡಿಸುವ ಸೇತುವೆಯಾಯಿತು ಎಂದೇ ಹೇಳಬಹುದು.

ಇನ್ನು ಬೈಟು ಚಾ ಎಂಬ ಹಂಚಿಕೊಂಡು ಕುಡಿಯುವ ಜನಪ್ರಿಯ ಚಹಾವು ಟೀ ಸಂಸ್ಕೃತಿಯ ವಿಶಿಷ್ಟ ಭಾಗವಾಗಿದೆ. ಒಂದು ಲೋಟ ಚಹಾವನ್ನು ಇಬ್ಬರು ಹಂಚಿಕೊಂಡು ಕುಡಿಯುವ ಮಜಾವೇ ಬೇರೆ. ಕಾಲೇಜು ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಸ್ನೇಹಿತರು, ಪ್ರಯಾಣಿಕರು ಬೈ ಟು ಚಹಾ ಕುಡಿಯುವ ಅಭ್ಯಾಸವನ್ನು ಇರಿಸಿಕೊಂಡಿರುತ್ತಾರೆ. ಒಂದು ಕಪ್ ಚಾ ಹಂಚಿಕೊಂಡು ಕುಡಿಯುವಾಗ ಅನುಭವಿಸುವ ಮಧುರ ಕ್ಷಣಗಳು, ಮಾತು, ನಗೆ, ಕೆಲವೊಮ್ಮೆ ಜೀವನದ ನಿರ್ಧಾರಗಳೂ, ದೊಡ್ಡ ಚರ್ಚೆಗಳೂ ನಡೆಯುವುದೂ ಇಲ್ಲಿಯೇ. ರಾಜಕೀಯ, ಕ್ರಿಕೆಟ್, ಸಿನಿಮಾ ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸುತ್ತಾ, ಜೀವನದ ಸುಂದರ ನೆನಪುಗಳನ್ನೂ, ಸ್ನೇಹ, ಆತ್ಮೀಯತೆ ಮತ್ತು ಸಣ್ಣ ಸಂತೋಷಗಳನ್ನೂ ಅನುಭವಿಸುವ ಈ ಬೈ ಟು ಚಾ ಕೇವಲ ಅರ್ಧ ಕಪ್ ಚಾ ಮಾತ್ರವಲ್ಲದೆ, ಸರಳತೆ ಹಾಗೂ ಸುಂದರ ಸ್ನೇಹದ ಪ್ರತಿಬಿಂಬವಾಗಿದೆ.

ಈ ಸಂದರ್ಭದಲ್ಲಿ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ನಾನು ಕೆಲಸ ಮಾಡುತ್ತಿದ್ದಾಗ, ನಮ್ಮ ಕಾಲೇಜಿನಲ್ಲಿರುವ ಕ್ಯಾಂಟೀನ್‌ಗೆ ವಿರಾಮ ಸಮಯದಲ್ಲಿ ನಾವು ಮಹಿಳಾ ಉಪನ್ಯಾಸಕರು ಟೀ ಕುಡಿಯಲು ಹೋಗುತ್ತಿದ್ದೆವು. ಅದೊಂದು ನಮ್ಮ ಮಾತುಕತೆ, ವಿಶ್ರಾಂತಿ ಹಾಗೂ ಆರಾಮದ ಸಣ್ಣ ಜಾಗವಾಗಿತ್ತು. ಕೆಲವೊಮ್ಮೆ ನಮ್ಮ ಜೊತೆಗೆ ಕೆಲವು ಪುರುಷ ಉಪನ್ಯಾಸಕರೂ ಜತೆಗೂಡುತ್ತಿದ್ದರು. ಆಗ ನಾನು ಒಂದು ವಿಷಯವನ್ನು ಗಮನಿಸಿದ್ದೆ. ನಾವು ಮಹಿಳೆಯರು ಹೋದಾಗ ಸಾಮಾನ್ಯ ಚಹಾವನ್ನು ಕೊಡುತ್ತಿದ್ದ, ಕ್ಯಾಂಟೀನ್ ಮಾಲಕರು, ಪುರುಷ ಉಪನ್ಯಾಸಕರೊಂದಿಗೆ ಹೋದಾಗ ವಿಶೇಷವಾಗಿ ದಪ್ಪ ಹಾಲು ಹಾಕಿ ತಯಾರಿಸಿದ ಉತ್ಕೃಷ್ಟ ದರ್ಜೆಯ ಚಹಾವನ್ನು ನೀಡುತ್ತಿದ್ದರು. ಒಂದು ಕಪ್ ಚಾ ನೀಡುವಾಗ ಈ ರೀತಿಯ ಅಸಮಾನತೆ ನನಗೆ ತುಂಬಾ ಬೇಸರ ಉಂಟು ಮಾಡುತ್ತಿತ್ತು. ಸಮಾಜದಲ್ಲಿ ಮಹಿಳೆಯರು ವಿದ್ಯೆಯಲ್ಲೂ, ಉದ್ಯೋಗದಲ್ಲೂ ಸರಿಸಮಾನರಾಗಿರುವಾಗ ಇಂತಹ ಸಣ್ಣ ಘಟನೆಗಳು ಲಿಂಗಭೇದ ಇನ್ನೂ ಜೀವಂತವಾಗಿದೆ ಎಂದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕೊನೆಗೆ ನಾವು ಮಹಿಳೆಯರು ಇದನ್ನು ಕ್ಯಾಂಟೀನ್ ಮಾಲಕರ ಗಮನಕ್ಕೆ ತಂದಾಗ ಅವರಿಗೆ ಮುಜುಗರವಾದದಂತೂ ನಿಜ. ಇನ್ನು ಮುಂದೆ ಯಾರಿಗೂ ಈ ತರ ಮಾಡಬಾರದೆಂದು ನಮ್ಮ ಅಭಿಪ್ರಾಯವಾಗಿತ್ತು.

ಇತ್ತೀಚಿಗೆ, ಬೆಂಗಳೂರಿನಲ್ಲಿರುವ ನನ್ನ ಆತ್ಮೀಯ ಗೆಳತಿ ಕುಶಲ ಅವರ ಮನೆಗೆ ಭೇಟಿ ನೀಡಿದ್ದೆ. ಸಾಯಂಕಾಲದ ಹೊತ್ತು. ಮಾತುಕತೆಯ ಬಳಿಕ, ಸಹಜವಾಗಿಯೇ ಟೀ ಮಾಡುತ್ತೇನೆ ಎಂದರು. ಸಾಮಾನ್ಯವಾಗಿ ಪ್ರತಿದಿನ ನಾವು ಕುಡಿಯುವ ಚಹಾದಂತೆಯೇ ಇರಬಹುದು ಎಂದು ಭಾವಿಸಿದ ನನಗೆ ಮೊದಲ ಸಿಪ್ ಬಾಯಿಗೆ ಇಡುತ್ತಿದ್ದಂತೆ, ಅದರ ವಿಶಿಷ್ಟ ರುಚಿ ಮನಸ್ಸನ್ನು ಸೆಳೆಯಿತು. ನಿಜಕ್ಕೂ ಅದೊಂದು ಅದ್ಭುತ ಚಹಾ ಆಗಿತ್ತು. ಹಾಲು, ಸಕ್ಕರೆ, ಚಾ ಹುಡಿ ಎಲ್ಲವೂ ಹಿತವಾಗಿ ಮಿತವಾಗಿ ಬೆರೆತ ಅಚ್ಚುಕಟ್ಟಾದ ಪಾನೀಯವಾಗಿತ್ತು. ನಾನು ಸಂಪೂರ್ಣವಾಗಿ ಮಾರುಹೋಗಿ, ಅದನ್ನು ತಯಾರಿಸುವ ಪರಿಯನ್ನೂ ಕೇಳಿ, ತಿಳಿದುಕೊಂಡೆ. ಎಲ್ಲಕ್ಕಿಂತಲೂ ಮಿಗಿಲಾಗಿ, ಆ ಚಹಾವನ್ನು ವಿಶೇಷವಾಗಿರಿಸಿದ ಸಂಗತಿ ಏನೆಂದರೆ, ಅವರು ಚಹಾವನ್ನು ಅತ್ಯಂತ ಬಿಸಿಯೂ ಅಲ್ಲದ, ತಣ್ಣಗೆಯೂ ಅಲ್ಲದ, ಕುಡಿಯುವ ಹದಕ್ಕೆ ತಯಾರಿಸಿ ಕೊಟ್ಟಿದ್ದರು. ಸಾಮಾನ್ಯವಾಗಿ ಸಂಜೆಯ ಹೊತ್ತು ಚಾ ಕುಡಿಯುವ ಅಭ್ಯಾಸ ಇಟ್ಟುಕೊಂಡವಳಲ್ಲ, ರಾತ್ರಿ ನಿದ್ದೆ ಬರುವುದಿಲ್ಲ ಎಂಬ ಭಾವನೆಯಿಂದ ಚಾ ಸೇವನೆ ತಪ್ಪಿಸುತ್ತಿದ್ದೆ. ಆದರೆ ನನ್ನ ಗೆಳತಿಯು ಪ್ರೀತಿಯಿಂದ, ಕಾಳಜಿಯಿಂದಲೂ ತಯಾರಿಸಿದ ಚಾ ನನ್ನ ಅಭಿಪ್ರಾಯವನ್ನೇ ಬದಲಿಸಿತು. ಇವತ್ತಿಗೂ ಆ ಚಹಾದ ರುಚಿ, ಸ್ವಾದ, ಮಧುರ ನೆನಪಂತೂ ಹೋಗಿಲ್ಲ.

ದುಬೈಯಲ್ಲಿ ಬಹಳ ಜನಪ್ರಿಯವಾಗಿರುವ ಕರಕ್ ಚಾ ದ ಸ್ವಾದವನ್ನು ಅನುಭವಿಸಿದ್ದೆ. ಇದೊಂದು ದಟ್ಟವಾದ, ಮಸಾಲೆಯ ಸುವಾಸನೆ ಭರಿತ ಚಹಾ ಆಗಿದೆ. ದೀರ್ಘಕಾಲ ನಿಧಾನವಾಗಿ ಕುದಿಸುವುದರಿಂದ, ಗಾಢ ಬಣ್ಣಕ್ಕೆ ತಿರುಗಿ ರುಚಿಕರವಾಗಿಯೂ ಇರುತ್ತದೆ. ಇನ್ನು ಕೆಲವು ಹೋಟೆಲ್‌ಗಳಲ್ಲಿ, ಕೆಫೆಗಳಲ್ಲಿ ಅತೀ ಸಿಹಿಯಾದ ಚಹಾ ಕೊಡುತ್ತಾರೆ ಎಂಬ ಕಾರಣಕ್ಕೆ, ಟೀ ಕುಡಿಯುವುದನ್ನೇ ನಿಲ್ಲಿಸಿಬಿಟ್ಟಿದ್ದೆ. ಇತ್ತೀಚಿಗಂತೂ ಪ್ರೀ ಡಯಾಬಿಟಿಕ್ ಆದ ಕಾರಣ ಶುಗರ್‌ಲೆಸ್ ಟೀ ಅಭ್ಯಾಸವಾಗಿ ಬಿಟ್ಟಿದೆ.

ಚಹಾ ಎಂಬ ಅದ್ಭುತ ಪೇಯವು ಅನೇಕ ಜನರ ಪ್ರಿಯವಾದ ಪಾನೀಯವಾದರೂ, ಕೆಲವರು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಎಂದು ಈ ಪೇಯದಿಂದ ದೂರವಿರುತ್ತಾರೆ. ಚಹಾದಲ್ಲಿ ಟ್ಯಾನಿನ್ ಎಂಬ ಅಂಶವಿದ್ದು, ಅತಿಯಾಗಿ ಸೇವಿಸಿದರೆ ಕೆಲವೊಮ್ಮೆ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಬಹುದೆಂದು ರೂಢಿ ಮಾಡಿಕೊಳ್ಳಲು ಹಿಂಜರಿಯುತ್ತಾರೆ. ಒಮ್ಮೊಮ್ಮೆ ಬರೀ ಹೊಟ್ಟೆಯಲ್ಲಿ ಚಹಾ ಸೇವಿಸಿದಾಗ ಅಜೀರ್ಣ, ಆಸಿಡ್ ಸಮಸ್ಯೆ ಹಾಗೂ ನಿದ್ರಾ ಹೀನತೆಯೂ ಉಂಟಾಗಬಹುದು. ನಿಯಮಿತವಾಗಿ ಟೀ ಕುಡಿದರೆ ಹೃದಯದ ಆರೋಗ್ಯ, ಜೀರ್ಣಕ್ರಿಯೆ ಮತ್ತು ರಕ್ತ ಸಕ್ಕರೆ ಮಟ್ಟ ನಿಯಂತ್ರಣ ಸೇರಿದಂತೆ ಕೆಲವೊಂದು ಲಾಭಗಳಿವೆ ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಸ್ವಲ್ಪ ಸಿಹಿ ಕಡಿಮೆಯಿದ್ದರೂ ಪರವಾಗಿಲ್ಲ, ಮಿತಿಯಲ್ಲಿ ಸೇವಿಸಿದಾಗ ದಣಿದ ಮನಸ್ಸಿಗೆ, ದೇಹಕ್ಕೆ ಉತ್ಸಾಹ ತುಂಬುವ ಶಕ್ತಿ ಚಹಾಕ್ಕೆ ಇದೆ. ಹೊಸ ಚೈತನ್ಯದಿಂದ ಪುನಃ ಕೆಲಸ ಮಾಡಲು ಉತ್ತೇಜಿಸುವ ಈ ಚಹಾವನ್ನು ಹಿತವಾಗಿ, ಮಿತವಾಗಿ ಸವಿದು, ಅದರ ಅನುಭವವನ್ನು ಆನಂದಿಸಬೇಕು. ಈಗಂತೂ ಎಲ್ಲಾ ಕಡೆಗಳಲ್ಲೂ ನವನವೀನತೆಯಿಂದ ಕೂಡಿದ ಹಲವಾರು ಟೀ ಸೆಂಟರ್‌ಗಳಿವೆ.

ಉದಾಹರಣೆಗೆ, ಚಾಯೋಸ್, ಚಾಯ್ ಪಾಯಿಂಟ್, ಚಾಯ್ ಸ್ಟೇಶನ್, ಚಾಯ್ ಡೇಸ್, ಅಮೃತ ಚಾಯ್ ಇತ್ಯಾದಿ. ಗ್ರೀನ್ ಟೀ, ಹರ್ಬಲ್ ಟೀ, ಲೈಮ್ ಟೀ, ಕಪ್ಪು ಚಹಾ, ಮುಂತಾದ ವಿಧ ವಿಧದ ಚಹಾವೂ ಬಳಕೆಯಲ್ಲಿದೆ. ಚಿಕ್ಕವರಿರುವಾಗ ಗೂಡಂಗಡಿಯಲ್ಲಿ ದೊರುತ್ತಿದ್ದ ಚಹಾ ಇಂದು ಬೃಹತ್ ಮಾರುಕಟ್ಟೆಯಾಗಿ ಅಚ್ಚರಿಯ ಮಟ್ಟಕ್ಕೆ ಬೆಳೆದಿದೆ. ಒಟ್ಟಿನಲ್ಲಿ ಚಹಾ ಕೇವಲ ಒಂದು ಪಾನೀಯವಲ್ಲ, ಅದು ಒಂದು ಭಾವನೆ, ಮನಸ್ಸಿಗೆ ನೆಮ್ಮದಿ ನೀಡುವ, ಸಂಬಂಧಗಳನ್ನು ಹತ್ತಿರ ಮಾಡುವ ಒಂದು ಮಾಯಾ ಪಾನೀಯ. ಚಹಾ ಎಂದರೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಅಡಗಿರುವ ಒಂದು ಸಿಹಿ ಸುಂದರ ಅನುಭವ.

- ಶೈಲಾರಾಣಿ ಬಿ., ಮಂಗಳೂರು.

ಜೀವದ ಅಂತರ!

ಥಾಯ್ಲೆಂಡ್‌ನ ಪಟ್ಟಾಯದಲ್ಲಿರುವ ಟೈಗರ್ ಪಾರ್ಕ್‌ಗೆ ಹೋಗುವ ಪ್ರವಾಸಿಗರು ಹುಲಿಯ ಮಗ್ಗುಲಲ್ಲಿ ಕುಳಿತು, ಅದರ ಬೆನ್ನ ಮೇಲೆ ಕೈ ಹಾಕಿ ಫೋಟೋ ತೆಗೆಸಿಕೊಳ್ಳುವುದನ್ನು ಹೆಮ್ಮೆಯಿಂದ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಾರೆ. ಆದರೆ ಇಡೀ ಕಾಡನ್ನು ಆಳುವ ಈ ಮೃಗ ಮನುಷ್ಯನ ಮುಂದೆ ಬೆಕ್ಕಿನಂತೆ ಶಾಂತವಾಗಿ ಕುಳಿತುಕೊಳ್ಳಲು ಕಾರಣವೇನು ಎಂದು ಯಾರೂ ಯೋಚಿಸುವುದಿಲ್ಲ. ಪ್ರವಾಸಿಗರ ಪ್ರದರ್ಶನಕ್ಕಾಗಿ ಈ ಹುಲಿಗಳಿಗೆ ಮತ್ತು ಬರಿಸುವ ಮತ್ತು ಅವುಗಳ ನರಮಂಡಲವನ್ನು ಮಂದಗೊಳಿಸುವ ರಾಸಾಯನಿಕ ಹಾಗೂ ಔಷಧಿಗಳನ್ನು ನೀಡಲಾಗುತ್ತದೆ ಎಂಬ ಕಹಿ ಸತ್ಯ ಅನೇಕರಿಗೆ ತಿಳಿಯದ ವಿಚಾರ. ಇದು ಪ್ರಾಣಿ ಪ್ರೇಮವಲ್ಲ, ಪ್ರಾಣಿಗಳ ಸಹಜ ನೈಸರ್ಗಿಕ ಹಕ್ಕನ್ನು ಕಸಿದುಕೊಂಡು ನಡೆಸುವ ಕ್ರೂರ ಮನರಂಜನೆ.

ಕರ್ನಾಟಕ ಮತ್ತು ಕೇರಳದ ದೇವಸ್ಥಾನಗಳಲ್ಲಿ ಆನೆಗಳನ್ನು ಪೂಜಿಸುವುದು, ಅವುಗಳಿಗೆ ಹಣ್ಣು-ಹಂಪಲು ನೀಡುವುದು ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ದೇವಸ್ಥಾನದ ಆನೆಗೆ ಬಾಳೆಹಣ್ಣು, ಕಬ್ಬು, ತೆಂಗಿನಕಾಯಿ ನೀಡಿ ಫೋಟೋ ತೆಗೆಸಿಕೊಳ್ಳುವುದು ಜನರ ಪಾಲಿಗೆ ಭಕ್ತಿಯ ಇನ್ನೊಂದು ಭಾವವಿರಬಹುದು. ಮಾವುತರು ಮತ್ತು ಕಾವಾಡಿಗರು ಹಣದ ಆಸೆಗಾಗಿ ಅಥವಾ ಯಾತ್ರಿಕರ ಒತ್ತಾಯಕ್ಕೆ ಮಣಿದು ಇದಕ್ಕೆ ಪ್ರೋತ್ಸಾಹ ನೀಡುತ್ತಾರೆ. ಆದರೆ ಈ ದೇವರ ಆನೆಗಳು ಭಕ್ತರನ್ನು, ಮಾವುತರನ್ನು ತುಳಿದು ಸಾಯಿಸಿದ ಅದೆಷ್ಟೋ ಪ್ರಕರಣಗಳಿವೆ. ಎಷ್ಟೇ ಆದರೂ ಅವು ಮೂಲತಃ ವನ್ಯಪ್ರಾಣಿ. ತೀರಾ ಹತ್ತಿರಕ್ಕೆ ಸಾಗುವ ಮುನ್ನ ಈ ವಿವೇಕ ನಮಗಿರಬೇಕು. ಕೆಲವರಿಗೆ ರಸ್ತೆಯಲ್ಲಿ ಸಾಗುವಾಗ ಗೋಮಾತೆ ಎಂದು ಹಸುಗಳ ಹತ್ತಿರ ಹೋಗಿ ನಮಸ್ಕರಿಸುವ, ಅವುಗಳ ಮೈದಡವುವ ಪರಿಪಾಠವಿದೆ. ಆದರೆ ಎಲ್ಲಾ ಹಸುಗಳೂ ಶಾಂತವಾಗಿರುವುದಿಲ್ಲ, ಕೆಲವು ತುಡುಗು ಸ್ವಭಾವದ ಅಥವಾ ಅಪರಿಚಿತರನ್ನು ಕಂಡು ಹೆದರುವ ದನಗಳು ತಮ್ಮ ಹತ್ತಿರ ಬಂದವರ ಮೇಲೆ ಹಾಯ್ದು ತೀವ್ರವಾಗಿ ಗಾಯಗೊಳಿಸಿದ, ಪ್ರಾಣ ತೆಗೆದ ಉದಾಹರಣೆಗಳಿವೆ.

ಅತಿಯಾದರೆ ಅಮೃತವೂ ವಿಷ ಎಂಬ ಗಾದೆ ಪ್ರಾಣಿಗಳೊಂದಿಗಿನ ನಮ್ಮ ಒಡನಾಟಕ್ಕೂ ಅನ್ವಯಿಸುತ್ತದೆ.

ಸಿನಿಮಾ ಸೆಲೆಬ್ರಿಟಿಗಳು ತಮ್ಮ ಸಾಕು ನಾಯಿ, ಬೆಕ್ಕುಗಳ ಜೊತೆ ಬೆಡ್ ರೂಮ್‌ನಲ್ಲಿರುವ, ಅವುಗಳಿಗೆ ಮುತ್ತಿಕ್ಕುವ ಪೋಸ್ಟ್‌ಗಳನ್ನು ಹಂಚಿಕೊಂಡಾಗ, ಅಭಿಮಾನಿಗಳು ಅದನ್ನು ಕುರುಡಾಗಿ ಅನುಕರಿಸುತ್ತಾರೆ. ಸಾಕುಪ್ರಾಣಿಗಳನ್ನು ಮನೆಯ ಸದಸ್ಯರಂತೆ ಸಾಕುವುದು ತಪ್ಪಲ್ಲ, ಆದರೆ ಅವುಗಳೊಂದಿಗೆ ಎಷ್ಟು ಅಂತರ ಕಾಯ್ದುಕೊಳ್ಳಬೇಕೋ ಅಷ್ಟಿರುವುದು ಆರೋಗ್ಯದ ದೃಷ್ಟಿಯಿಂದ ಅತ್ಯಂತ ಅಗತ್ಯ. ನಾಯಿ ಮತ್ತು ಬೆಕ್ಕುಗಳನ್ನು ಬೆಡ್ ರೂಮ್‌ಗಳಲ್ಲಿ ಮಲಗಿಸಿಕೊಳ್ಳುವುದು, ಅವುಗಳ ಲಾಲಾರಸ ನಮ್ಮ ಮುಖ ಅಥವಾ ಬಾಯಿಗೆ ತಗಲುವಂತೆ ಸರಸವಾಡುವುದು ಅತ್ಯಂತ ಅಪಾಯಕಾರಿ. ಈ ಪ್ರಾಣಿಗಳ ಮೂಲಕ ಮನುಷ್ಯರಿಗೆ ಹರಡುವ ಜೂನೋಟಿಕ್ ಕಾಯಿಲೆಗಳು ಹತ್ತು ಹಲವು. ಸಾಕುಪ್ರಾಣಿಗಳಿಗೆ ಲಸಿಕೆ ಹಾಕಿಸಿದ್ದರೂ, ಕೆಲವೊಮ್ಮೆ ಗೀರು ಅಥವಾ ಲಾಲಾರಸದ ಮೂಲಕ ನರಮಂಡಲಕ್ಕೆ ಹಾನಿ ಮಾಡುವ ಈ ಕಾಯಿಲೆ ಹರಡುವ ಸಾಧ್ಯತೆ ಇರುತ್ತದೆ. ಸಾಕು ಪ್ರಾಣಿಗಳಿಂದ ಹರಡುವ ಬ್ಯಾಕ್ಟೀರಿಯಾಗಳು ಪ್ರಾಣಾಂತಿಕ ಕಾಯಿಲೆಗೆ ದಾರಿಯಾಗಬಹುದು.

ದುಬಾರೆ ದುರ್ಘಟನೆಯ ನಂತರ ಎಚ್ಚೆತ್ತುಕೊಂಡಿರುವ ರಾಜ್ಯ ಸರಕಾರ ಈಗ ಆನೆ ಶಿಬಿರಗಳಲ್ಲಿ ಸೆಲ್ಫಿ ತೆಗೆಯುವುದನ್ನು ಮತ್ತು ಆನೆಗಳ ಹತ್ತಿರ ಹೋಗುವುದನ್ನು ಕಡ್ಡಾಯವಾಗಿ ನಿರ್ಬಂಧಿಸಿದೆ. ಆದರೆ, ನಮ್ಮ ಸರಕಾರದ ನೀತಿಗಳು ಯಾವಾಗಲೂ ಅವಘಡ ಸಂಭವಿಸಿದ ನಂತರ ಕೈಗೊಳ್ಳುವ ಮರಣೋತ್ತರ ಕ್ರಮಗಳು. ಅವಘಡಗಳ ಸಾಧ್ಯತೆಯನ್ನು ಮುಂಚಿತವಾಗಿಯೇ ಊಹಿಸಿ ಕಠಿಣ ನಿಯಮಗಳನ್ನು ಜಾರಿಗೆ ತರಬೇಕಾದುದು ಸರಕಾರದ ಕರ್ತವ್ಯ.



ಪ್ರಾಣಿಗಳ ಜೊತೆಗಿನ ಫೋಟೋ ಕ್ರೇಜ್ ಅನ್ನು ತಡೆಗಟ್ಟಲು ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ಅದರ ಪ್ರಸಾರವನ್ನು ತಡೆಗಟ್ಟುವುದು. ಸಾಮಾಜಿಕ ಜಾಲತಾಣಗಳಾದ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಇತ್ಯಾದಿಗಳಲ್ಲಿ ವನ್ಯಪ್ರಾಣಿಗಳನ್ನು ಹಿಡಿದು ಪ್ರದರ್ಶಿಸುವ, ಅವುಗಳ ಜೊತೆ ಅಪಾಯಕಾರಿ ಸೆಲ್ಫಿ ತೆಗೆದುಕೊಳ್ಳುವ ಫೋಟೋ ಮತ್ತು ವಿಡಿಯೋಗಳ ಪೋಸ್ಟಿಂಗ್ ಅನ್ನು ಕಾನೂನಾತ್ಮಕವಾಗಿ ನಿಷೇಧಿಸಬೇಕು. ಸೈಬರ್ ಕಾನೂನಿನ ಅಡಿಯಲ್ಲಿ ಇಂತಹ ಕಂಟೆಂಟ್‌ಗಳನ್ನು ಪ್ರಾಣಿ ಹಿಂಸೆ ಪ್ರಚೋದಕ ಎಂದು ಪರಿಗಣಿಸಿ, ಅಂತಹ ಖಾತೆಗಳನ್ನು ನಿರ್ಬಂಧಿಸುವ ವ್ಯವಸ್ಥೆ ಬರಬೇಕು. ಯಾವಾಗ ಜಾಲತಾಣಗಳಲ್ಲಿ ಜನಪ್ರಿಯತೆ, ಲೈಕ್ಸ್ ಮತ್ತು ರೀಲ್ ಮೂಲಕ ಹಣ ಗಳಿಸುವ ಅವಕಾಶ ನಿಲ್ಲುತ್ತದೆಯೋ, ಆಗ ಜನರ ಈ ಸೆಲ್ಫಿ ಕ್ರೇಜ್ ತಾನಾಗಿಯೇ ಕಡಿಮೆಯಾಗುತ್ತದೆ.

ಪ್ರಾಣಿಗಳನ್ನು ಪ್ರೀತಿಸುವುದು ಎಂದರೆ ಅವುಗಳನ್ನು ನಮ್ಮ ಬೆಡ್ ರೂಮಿಗೆ ತಂದು ಕೂರಿಸಿ ಕೊಳ್ಳುವುದಲ್ಲ ಅಥವಾ ಅವುಗಳನ್ನು ಮಡಿಲಲ್ಲಿ ಇಟ್ಟುಕೊಂಡು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದಲ್ಲ. ನಿಜವಾದ ಪ್ರಾಣಿ ಪ್ರೇಮ ಎಂದರೆ ಅವುಗಳ ಸ್ವಾತಂತ್ರ್ಯವನ್ನು ಗೌರವಿಸುವುದು.

ಕಾಡಿನ ಪ್ರಾಣಿ ಕಾಡಿನಲ್ಲೇ ಮುಕ್ತವಾಗಿರಬೇಕು, ನಾಡಿನ ಪ್ರಾಣಿಗೆ ಅದರದೇ ಆದ ಗಡಿ ಇರಬೇಕು. ಪ್ರಕೃತಿಯ ಪ್ರತಿಯೊಂದು ಜೀವಿಗೂ ತನ್ನದೇ ಆದ ಬದುಕುವ ಹಕ್ಕಿದೆ. ಅದಕ್ಕೆ ತನ್ನದೇ ಆದ ಆವರಣದ ಅಗತ್ಯವಿದೆ. ಮಾನವ ತನ್ನ ಅಹಂಕಾರ ಮತ್ತು ಪ್ರದರ್ಶನ ಬುದ್ಧಿಯಿಂದ ಆ ಆವರಣವನ್ನು ಅತಿಕ್ರಮಿಸಿದಾಗ ಪ್ರಕೃತಿ ಭೀಕರವಾಗಿ ಪ್ರತಿಕ್ರಿಯಿಸುತ್ತದೆ. ದುಬಾರೆ ಘಟನೆ ನಮಗೊಂದು ಕಟು ಎಚ್ಚರಿಕೆ. ಪ್ರಾಣಿಗಳ ಜತೆಗಿನ ನಮ್ಮ ಒಡನಾಟವು ಫೋಟೋದ ಸಾಕ್ಷ್ಯ ಬೇಡದಿರಲಿ, ಹೃದಯದ ಒಲುಮೆಯಷ್ಟೇ ಸಾಕಾಗಲಿ.

- ಲೋಕೇಶ್ ಕಾಯರ್ಗ

> ದಿನಗಳು ಕಳೆದವು. ಸ್ವೀಡನ್‌ನ ದಕ್ಷಿಣ ತುದಿಯ ಇಸ್ತಾಡ್ ನಗರದಲ್ಲಿ ಜನರು ಅಧಿಕೃತ ವಿಜೇತರಿಗಾಗಿ ಕಾಯುತ್ತಿದ್ದರು. ಆದರೆ, ಅಲ್ಲಿಗೆ ಮೊದಲು ತಲುಪಿದ್ದು ಯಾರು ಗೊತ್ತೇ? ಇಡೀ ದೇಶವೇ ಆಶ್ಚರ್ಯಚಕಿತರಾಗುವಂತೆ, ಯಾವುದೇ ಅಧಿಕೃತ ಸೌಲಭ್ಯವಿಲ್ಲದ, ನಿದ್ದೆಯಿಲ್ಲದೆ ಸೈಕಲ್ ತುಳಿದಿದ್ದ ಆ ಬಿಳಿ ಗಡ್ಡದ ತಾತ!

ವಯಸ್ಸು ದೇಹಕ್ಕಷ್ಟೇ, ಮನಸ್ಸಿಗಲ್ಲ!

ಒಂದೊಳ್ಳೆ ಮಾತು

1951ರ ಜುಲೈ ತಿಂಗಳ ಮುಂಜಾನೆ, ಸ್ವೀಡನ್‌ನ ಉತ್ತರ ತುದಿಯ ಹಪರಾಂಡಾದಲ್ಲಿ ಚಳಿಯ ಗಾಳಿ ಬೀಸುತ್ತಿತ್ತು. ಅಲ್ಲಿ ದೇಶದ ಅತ್ಯಂತ ಕಠಿಣ, 1764 ಕಿಲೋ ಮೀಟರ್ ಉದ್ದದ ಸ್ವೆರಿಗಲೋಪೆಟ್ ಸೈಕಲ್ ಪಂದ್ಯಾವಳಿ ಆರಂಭವಾಗಲು ಕ್ಷಣಗಣನೆ ನಡೆದಿತ್ತು. ಯುವ, ಬಲಿಷ್ಠ ಕ್ರೀಡಾಪಟುಗಳು ಪಂದ್ಯದ ಉತ್ಸಾಹದಲ್ಲಿ ನಿಂತಿದ್ದರು. ಆದರೆ, ಆ ಗುಂಪಿನಿಂದ ಸ್ವಲ್ಪ ದೂರದಲ್ಲಿ, ಬಿಳಿ ಗಡ್ಡದ, 66 ವರ್ಷದ ವೃದ್ಧರೊಬ್ಬರು ತಮ್ಮ ಹಳೆಯ ಸೈಕಲ್ ಹಿಡಿದು ಶಾಂತವಾಗಿ ನಿಂತಿದ್ದರು. ಅವರೇ ಗುಸ್ತಾ-ಹಾಕನ್ಸನ್.

ವಯಸ್ಸು 40 ದಾಟಿದೆ ಎಂಬ ಒಂದೇ ಕಾರಣಕ್ಕೆ ಸಂಘಟಕರು ಅವರಿಗೆ ಸ್ಪರ್ಧಿಸಲು ಅವಕಾಶ ನಿರಾಕರಿಸಿದ್ದರು. ನಿಮಗೆ ವಯಸ್ಸಾಗಿದೆ, ಈ ದೂರವನ್ನು ಕ್ರಮಿಸುವುದು ನಿಮ್ಮ ಕೈಲಾಗದ ಕೆಲಸ ಎಂದು ಜಗತ್ತು ಅವರ ಮುಖಕ್ಕೆ ಹೊಡೆದಂತೆ ಹೇಳಿತ್ತು. ಆದರೆ ಗುಸ್ತಾ- ಅವರ ಮನಸ್ಸಿನ ಗಟ್ಟಿ ಸಂಕಲ್ಪವನ್ನು ತಡೆಯಲು ಆ ನಿಯಮಗಳಿಗೆ ಸಾಧ್ಯವಿರಲಿಲ್ಲ. ಅವರು ಮನೆಗೆ ಮರಳಲಿಲ್ಲ.

ಬದಲಿಗೆ, ಅವರ ಪತ್ನಿ ಪ್ರೀತಿಯಿಂದ ಕೈಯಾರೆ ಹೊಲಿದು ಕೊಟ್ಟಿದ್ದ ಬಿಳಿ ಬಟ್ಟೆಯ ಮೇಲೆ ಕೆಂಪು ಬಣ್ಣದಲ್ಲಿ ಸೊನ್ನೆ ಎಂಬ ಸಂಖ್ಯೆಯನ್ನು ಬರೆದು ತಮ್ಮ ಅಂಗಿಗೆ ಸಿಕ್ಕಿಸಿಕೊಂಡರು. ಜಗತ್ತು ಅವರನ್ನು ಶೂನ್ಯ ಎಂದು ಪರಿಗಣಿಸಿದ್ದರೆ, ಅವರು ಅದನ್ನೇ ತಮ್ಮ ಹೆಮ್ಮೆಯ ಗುರುತಾಗಿ ಸ್ವೀಕರಿಸಿದ್ದರು.

ಕೊನೆಯ ಅಧಿಕೃತ ಸೈಕಲ್ ಸವಾರ ಹೊರಟ ಒಂದು ನಿಮಿಷದ ನಂತರ, ಗುಸ್ತಾ- ತಮ್ಮ ಹಳೆಯ, ಮಡ್‌ಗಾರ್ಡ್‌ಗಳಿದ್ದ ಭಾರೀ ಸೈಕಲ್ ತುಳಿಯಲು ಆರಂಭಿಸಿದರು. ಅವರ ಬಳಿ ಯಾವುದೇ ಆಧುನಿಕ ಕ್ರೀಡಾ ಸೈಕಲ್ ಇರಲಿಲ್ಲ, ಕೇವಲ ಒಂದು ಸಣ್ಣ ದೀಪವಿತ್ತು.

ಸ್ಪರ್ಧೆ ಮುಂದುವರಿದಂತೆ, ಯುವ ಸವಾರರು ರಾತ್ರಿಯಾಗುತ್ತಿದ್ದಂತೆ ಆಯಾಸಗೊಂಡು, ವಿಶ್ರಾಂತಿ ಗೃಹಗಳಲ್ಲಿ ಮಲಗುತ್ತಿದ್ದರು. ಆದರೆ ಗುಸ್ತಾ- ನಿಲ್ಲಲಿಲ್ಲ. ಇಡೀ ದೇಶವೇ ನಿದ್ರಿಸುತ್ತಿರುವಾಗ, ಕತ್ತಲ ಹಾದಿಯಲ್ಲಿ ಆ ಸಣ್ಣ ದೀಪದ ಬೆಳಕಿನಲ್ಲಿ ಅವರು ಸೈಕಲ್ ತುಳಿಯುತ್ತಲೇ ಇದ್ದರು.

ದಣಿವಾರಿಸಿಕೊಳ್ಳಲು ರಸ್ತೆಬದಿಯಲ್ಲಿ ಕೆಲವೇ ನಿಮಿಷಗಳು ಕಣ್ಣು ಮುಚ್ಚುತ್ತಿದ್ದರು, ನಂತರ ಮತ್ತೆ ಪಯಣ ಮುಂದುವರಿಸುತ್ತಿದ್ದರು. ವಯಸ್ಸಿನ ಮಿತಿಯನ್ನು ಹೇರಿದ ಸಮಾಜಕ್ಕೆ, ತನು ಮುಪ್ಪಾದರೂ ಮನಸ್ಸು ಮುಪ್ಪಾಗುವುದಿಲ್ಲ ಎಂಬುದನ್ನು ಅವರು ಸಾಬೀತುಪಡಿಸಬೇಕಿತ್ತು.

ದಿನಗಳು ಕಳೆದವು. ಸ್ವೀಡನ್‌ನ ದಕ್ಷಿಣ ತುದಿಯ ಇಸ್ತಾಡ್ ನಗರದಲ್ಲಿ ಜನರು ಅಧಿಕೃತ ವಿಜೇತರಿಗಾಗಿ ಕಾಯುತ್ತಿದ್ದರು. ಆದರೆ, ಅಲ್ಲಿಗೆ ಮೊದಲು ತಲುಪಿದ್ದು ಯಾರು ಗೊತ್ತೇ? ಇಡೀ ದೇಶವೇ ಆಶ್ಚರ್ಯಚಕಿತರಾಗುವಂತೆ, ಯಾವುದೇ ಅಧಿಕೃತ ಸೌಲಭ್ಯವಿಲ್ಲದ, ನಿದ್ದೆಯಿಲ್ಲದೆ ಸೈಕಲ್ ತುಳಿದಿದ್ದ ಆ ಬಿಳಿ ಗಡ್ಡದ ತಾತ!

6 ದಿನಗಳು, 14 ಗಂಟೆಗಳು ಮತ್ತು 20 ನಿಮಿಷಗಳ ಸತತ ಸೈಕಲಿಂಗ್ ನಂತರ, ಗುಸ್ತಾಫ್ ಹಾಕನ್ಸನ್ ಯುವ ಸ್ಪರ್ಧಿಗಳಿಗಿಂತ ಇಡೀ ಒಂದು ದಿನ (24 ಗಂಟೆಗಳು) ಮುಂಚಿತವಾಗಿಯೇ ಗುರಿ ತಲುಪಿದ್ದರು. ಅಂದು ಇಸ್ತಾಡ್ ನಗರದಲ್ಲಿ ನೆರೆದಿದ್ದ ಸಹಸ್ರಾರು ಜನರ ಕಣ್ಣುಗಳಲ್ಲಿ ಆನಂದ ಬಾಷ್ಪವಿತ್ತು.

ಇಡೀ ದೇಶವೇ ಅವರನ್ನು ಸ್ಟಾಫಾರ್ಫರ್ ಉಕ್ಕಿನ ತಾತ ಎಂದು ಪ್ರೀತಿಯಿಂದ ಕರೆದು ಸಂಭ್ರಮಿಸಿತು. ಪತ್ರಿಕೆಗಳು ಅವರ ಸಾಹಸವನ್ನು ಕೊಂಡಾಡಿದವು, ಸ್ವೀಡನ್ ದೇಶದ ರಾಜ ಆರನೇ ಗುಸ್ತಾಫ್ ಅಡಾಲ್ಫ್ ಅವರೇ ಸ್ವತಃ ಈ ಮಹಾನ್ ಚೇತನವನ್ನು ಆಹ್ವಾನಿಸಿ ಗೌರವಿಸಿದರು.

ಗುಸ್ತಾಫ್ ಕೇವಲ ಒಂದು ಸೈಕಲ್ ಪಂದ್ಯವನ್ನು ಗೆಲ್ಲಲಿಲ್ಲ, ಬದಲಿಗೆ ವಯಸ್ಸಿನ ಹೆಸರಿನಲ್ಲಿ ಮನುಷ್ಯನ ಕನಸುಗಳಿಗೆ ಬೇಲಿ ಹಾಕುವ ಸಮಾಜದ ಕಲ್ಪನೆಯನ್ನು ಗೆದ್ದರು. ಅವರು ತಮ್ಮ 100ರ ಹರೆಯದಲ್ಲೂ ಸೈಕಲ್ ತುಳಿಯುವುದನ್ನು ನಿಲ್ಲಿಸಲಿಲ್ಲ. ತಮ್ಮ 102ನೇ ಹುಟ್ಟುಹಬ್ಬದ ಕೆಲವೇ ದಿನಗಳ ಮುನ್ನ ಅವರು ಜಗತ್ತನ್ನು ತೊರೆದರು. ನಮ್ಮ ಕನಸುಗಳನ್ನು ಬೆನ್ನಟ್ಟಲು ವಯಸ್ಸು ಕೇವಲ ಒಂದು ಸಂಖ್ಯೆಯಷ್ಟೇ. ಮನಸ್ಸಿನಲ್ಲಿ ಛಲವಿದ್ದರೆ, ಜಗತ್ತು ಮುಗಿಯಿತು ಅಂದುಕೊಂಡ ಕಡೆಯಿಂದಲೇ ನಾವು ಹೊಸ ಇತಿಹಾಸವನ್ನು ಸೃಷ್ಟಿಸಬಹುದು. ದಿನನಿತ್ಯದ ವ್ಯಾಯಾಮ ಮಾಡಲು, ಹೊಸ ವಿಚಾರ, ಒಂದನ್ನು ಕಲೆಯೊಂದನ್ನು ಕಲಿಯಲು ಸದಾ ನಾವು ನೂರು ನೆಪಗಳನ್ನು ಹುಡುಕುತ್ತೇವೆ.

ಆದರೆ ನಮ್ಮ ಒಬ್ಬರು ವಯಸ್ಸಿನ ಹಂಗಿಲ್ಲದೆ ಸಾಧಿಸಿ ತೋರಿಸಿದಾಗ ಬೆರಗಾಗುತ್ತೇವೆ. ವಯಸ್ಸು ದೇಹಕ್ಕೆ ಮಾತ್ರ ಮನಸ್ಸಿಗೆ ಅಲ್ಲ. ಅದನ್ನು ಅರಿತಾಗ ನಮಗೆ ಯಾವ ಮಿತಿಯೂ ಇರುವುದಿಲ್ಲ.

- ರೂಪಾ ಗುರುರಾಜ್

ವೈವಿಧ್ಯ ಪರಿಸರದಲ್ಲಿ ಬೆಳೆದಾಗಲೇ ಮಕ್ಕಳ ವ್ಯಕ್ತಿತ್ವ ವಿಕಸನ

ಶಾಲಾ ಸೇರ್ಪಡೆ ದಿನಗಳು ಹತ್ತಿರವಾಗುತ್ತಿವೆ. ಪ್ರತಿಯೊಬ್ಬ ಪೋಷಕರ ಮನಸ್ಸಿನಲ್ಲೂ ನಮ್ಮ ಮಗುವಿಗೆ ಯಾವ ಶಾಲೆ ಉತ್ತಮ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಆದರೆ ಇಂದು ಶಿಕ್ಷಣದ ಆಯ್ಕೆಯಲ್ಲಿ ಮತ್ತೊಂದು ಅಪಾಯಕಾರಿ ಪ್ರವೃತ್ತಿ ನಿಧಾನವಾಗಿ ಹೆಚ್ಚುತ್ತಿದೆ. ಹಳ್ಳಿ, ಪಟ್ಟಣ, ಧಾರ್ಮಿಕ ಕೇಂದ್ರಗಳು, ಮಠಗಳು, ಮಸೀದಿಗಳು, ದೇವಸ್ಥಾನಗಳು, ಸಂಘಟನೆಗಳು, ಜಾತಿ ಹಾಗೂ ಸಮುದಾಯಗಳ ಹೆಸರಿನಲ್ಲಿ ಅನೇಕ ಶಾಲೆಗಳು ಆರಂಭವಾಗುತ್ತಿವೆ. ಶಿಕ್ಷಣ ಎಂಬ ಮಹತ್ವದ ಕ್ಷೇತ್ರ ನಿಧಾನವಾಗಿ ಧರ್ಮ ಮತ್ತು ಸಮುದಾಯಗಳ ಗಡಿಗಳೊಳಗೆ ಸೀಮಿತವಾಗುತ್ತಿರುವುದು ಸಮಾಜದ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ ಬೆಳವಣಿಗೆಯಾಗಿದೆ.

ಮಕ್ಕಳು ಕೇವಲ ಪಾಠಪುಸ್ತಕಗಳನ್ನು ಓದಲು ಮಾತ್ರ ಶಾಲೆಗೆ ಹೋಗುವುದಿಲ್ಲ. ಅವರು ಸಮಾಜವನ್ನು ಅರ್ಥಮಾಡಿಕೊಳ್ಳಲು, ಬೇರೆ ಬೇರೆ ಜನರನ್ನು ಪರಿಚಯಿಸಿಕೊಳ್ಳಲು, ಪರಸ್ಪರ ಗೌರವವನ್ನು ಕಲಿಯಲು ಮತ್ತು ಒಟ್ಟಾಗಿ ಬದುಕುವ ಮೌಲ್ಯಗಳನ್ನು ಅರಿಯಲು ಶಾಲೆಗೆ ಹೋಗುತ್ತಾರೆ. ಒಂದು ತರಗತಿಯಲ್ಲಿ ವಿಭಿನ್ನ ಭಾಷೆ ಮಾತನಾಡುವ ಮಕ್ಕಳು ಇರಬೇಕು. ಬೇರೆ ಬೇರೆ ಧರ್ಮಗಳನ್ನು ಅನುಸರಿಸುವ ಸ್ನೇಹಿತರು ಇರಬೇಕು. ವಿಭಿನ್ನ ಆಹಾರ ಪದ್ಧತಿ, ಉಡುಗೆ, ಸಂಸ್ಕೃತಿ, ಹಬ್ಬಗಳು ಮತ್ತು ಜೀವನ ಶೈಲಿಗಳನ್ನು ಪರಿಚಯಿಸುವ ವಾತಾವರಣ ಇರಬೇಕು. ಅದೇ ನಿಜವಾದ ಶಿಕ್ಷಣ.

ಆದರೆ ಒಂದೇ ಧರ್ಮ, ಒಂದೇ ಜಾತಿ ಅಥವಾ ಒಂದೇ ಸಮುದಾಯಕ್ಕೆ ಸೀಮಿತವಾದ ಶಾಲೆಗಳಲ್ಲಿ ಈ ವೈವಿಧ್ಯತೆಯ ಅನುಭವ ಕಡಿಮೆಯಾಗುತ್ತದೆ. ಅಲ್ಲಿ ಮಕ್ಕಳು ತಮ್ಮ ಸಮುದಾಯದ ಗಡಿಗಳೊಳಗೆ ಮಾತ್ರ ಬೆಳೆದುಬಿಡುವ ಸಾಧ್ಯತೆ ಹೆಚ್ಚಾಗುತ್ತದೆ. ಹೊರ ಜಗತ್ತಿನಲ್ಲಿ ಇರುವ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವ ಅವಕಾಶ ಅವರಿಗೆ ಕಡಿಮೆಯಾಗುತ್ತದೆ. ಇದರಿಂದ ಸಮಾಜದಲ್ಲಿ ಅಂತರ, ಅನುಮಾನ ಮತ್ತು ಬೇಧಭಾವಗಳು ನಿಧಾನವಾಗಿ ಬೆಳೆಸಲ್ಪಡುವ ಅಪಾಯವಿದೆ.

ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಮಕ್ಕಳು ಎಲ್ಲ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳ ನಡುವೆ ಬೆಳೆಬೇಕು. ಏಕೆಂದರೆ ನಾಳೆ ಅವರು ಬದುಕಬೇಕಿರುವುದು ಒಂದೇ ಸಮುದಾಯದೊಳಗೆ ಅಲ್ಲ, ಎಲ್ಲರನ್ನು ಒಳಗೊಂಡ ಸಮಾಜದ ಮಧ್ಯೆ. ವೈದ್ಯರಾಗಲಿ, ಶಿಕ್ಷಕರಾಗಲಿ, ಅಧಿಕಾರಿಗಳಾಗಲಿ, ವ್ಯಾಪಾರಿಗಳಾಗಲಿ ಅಥವಾ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಲಿ. ಅವರು ಎಲ್ಲ ರೀತಿಯ ಜನರ ಜೊತೆ ಬೆರೆತು ಕೆಲಸ ಮಾಡಬೇಕಾಗುತ್ತದೆ. ಈ ಹೊಂದಾಣಿಕೆಯ ಗುಣ ಶಾಲೆಯ ವಯಸ್ಸಿನಲ್ಲೇ ಬೆಳೆಯಬೇಕು.

ಒಂದು ಸರ್ಕಾರಿ ಶಾಲೆಯ ತರಗತಿಯನ್ನು ಗಮನಿಸಿದರೆ ಅಲ್ಲಿ ರೈತನ ಮಗನೂ ಇರುತ್ತಾನೆ. ಕಾರ್ಮಿಕರ ಮಗಳೂ ಇರುತ್ತಾಳೆ. ವ್ಯಾಪಾರಿಯ ಮಗನೂ ಇರಬಹುದು. ಹಿಂದೂ, ಮುಸ್ಲಿಂ, ಕ್ರೈಸ್ತ, ದಲಿತ, ಒಬಿಸಿ, ಬೇರೆ ಬೇರೆ ಸಮುದಾಯದ ಮಕ್ಕಳು ಒಂದೇ ಬೆಂಚಿನಲ್ಲಿ ಕೂತು ಓದುತ್ತಾರೆ. ಪರಸ್ಪರ ಊಟ ಹಂಚಿಕೊಳ್ಳುತ್ತಾರೆ. ಹಬ್ಬಗಳನ್ನು ಒಟ್ಟಿಗೆ ಆಚರಿಸುತ್ತಾರೆ. ಇದೇ ನಿಜವಾದ ಪ್ರಜಾಸತ್ತಾತ್ಮಕ ಭಾರತದ ಪ್ರತಿಬಿಂಬ. ಇದೇ ಅನುಭವ ಮಕ್ಕಳಲ್ಲಿ ಮಾನವೀಯತೆಯನ್ನು ಬೆಳೆಸುತ್ತದೆ.

ಕೆಲವರು ನಮ್ಮ ಧರ್ಮದ ಮೌಲ್ಯಗಳನ್ನು ಮಕ್ಕಳಿಗೆ ಕಲಿಸಬೇಕು ಎಂಬ ಕಾರಣದಿಂದ ಸಮುದಾಯ ಆಧಾರಿತ ಶಾಲೆಗಳನ್ನು ಆಯ್ಕೆ ಮಾಡುತ್ತಾರೆ. ಆದರೆ ಮೌಲ್ಯಗಳು ಶಾಲೆಯ ಹೆಸರಿನಿಂದ ಮಾತ್ರ ಬರುವುದು ಅಲ್ಲ. ಒಳ್ಳೆಯ ಸಂಸ್ಕಾರ ಮನೆಗಳಿಂದ ಬರುತ್ತವೆ. ಮಾನವೀಯತೆ, ಗೌರವ, ಪ್ರೀತಿ, ಸಹನೆ ಮತ್ತು ಸಹಬಾಳ್ವೆ ಇವುಗಳನ್ನು ಮಕ್ಕಳು ಸಮಾಜದ ಮಧ್ಯೆ ಬೆಳೆದಾಗಲೇ ಚೆನ್ನಾಗಿ ಕಲಿಯುತ್ತಾರೆ. ಬೇರೆ ಧರ್ಮದ ಸ್ನೇಹಿತನ ಜೊತೆ ಆಟವಾಡಿದಾಗ, ಬೇರೆ ಭಾಷೆಯ ಸ್ನೇಹಿತನ ಜೊತೆ ಮಾತನಾಡಿದಾಗ, ವಿಭಿನ್ನ ಸಂಸ್ಕೃತಿಯ ಕುಟುಂಬವನ್ನು ನೋಡಿದಾಗ ಮಗುವಿನ ಮನಸ್ಸು ವಿಶಾಲವಾಗುತ್ತದೆ.

ಇಂದು ಸರ್ಕಾರಿ ಶಾಲೆಗಳ ಪರಿಸ್ಥಿತಿಯೂ ಹಿಂದಿನಂತಿಲ್ಲ, ಅನೇಕ ಕಡೆಗಳಲ್ಲಿ ಆಧುನಿಕ ಕಟ್ಟಡಗಳು, ಉತ್ತಮ ಶಿಕ್ಷಕರು, ಡಿಜಿಟಲ್ ಕಲಿಕೆ, ಮಧ್ಯಾಹ್ನದ ಊಟ, ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ, ಕ್ರೀಡಾ ಸೌಲಭ್ಯಗಳು ಸೇರಿ ಉತ್ತಮ ವ್ಯವಸ್ಥೆಗಳು ಲಭ್ಯವಾಗುತ್ತಿವೆ. ಸರ್ಕಾರ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಆದ್ದರಿಂದ ಖಾಸಗಿ ಶಾಲೆಯೇ ಉತ್ತಮ ಎಂಬ ಮನೋಭಾವದಿಂದ ಹೊರಬರಬೇಕಾಗಿದೆ.

ಕೆಲವರು ಕೇವಲ ಪ್ರತಿಷ್ಠೆಗಾಗಿ ದುಬಾರಿ ಶಾಲೆಗಳಿಗೆ ಲಕ್ಷಾಂತರ ಹಣ ಖರ್ಚು ಮಾಡುತ್ತಾರೆ. ಆದರೆ ಶಿಕ್ಷಣದ ನಿಜವಾದ ಗುಣಮಟ್ಟ ಶಾಲೆಯ ಕಟ್ಟಡದಲ್ಲಿ ಅಲ್ಲ; ಮಕ್ಕಳಿಗೆ ಸಿಗುವ ಮಾನವೀಯ ವಾತಾವರಣದಲ್ಲಿ ಇದೆ. ಮಕ್ಕಳನ್ನು ಸಮಾಜದ ಎಲ್ಲ ವರ್ಗಗಳ ಜೊತೆ ಬೆರೆಸುವ ಶಿಕ್ಷಣವೇ ನಿಜವಾದ ಶಿಕ್ಷಣ.

ಆಂಗ್ಲ ಮಾಧ್ಯಮ ಬೇಕೆಂದರೆ ಆಯ್ಕೆ ಮಾಡಬಹುದು. ಆದರೆ ಮಕ್ಕಳು ವಿವಿಧ ಹಿನ್ನೆಲೆಯ ವಿದ್ಯಾರ್ಥಿಗಳ ಜೊತೆ ಓದುತ್ತಿರುವ ಶಾಲೆಗಳನ್ನು ಆಯ್ಕೆ ಮಾಡುವುದು ಉತ್ತಮ. ಧರ್ಮ, ಜಾತಿ ಅಥವಾ ಸಂಘಟನೆಗಳ ಹೆಸರಿನಲ್ಲಿ ಸಮಾಜದಲ್ಲಿ ಅಂತರ ಸೃಷ್ಟಿಸುವ ಕನಿಷ್ಠ ಗುಣಮಟ್ಟವಿಲ್ಲದ ಸಂಸ್ಥೆಗಳನ್ನು ದೂರವಿಡಬೇಕು.

ನಾವು ನಮ್ಮ ಬಾಲ್ಯದಲ್ಲಿ ಕಂಡ ವೈವಿಧ್ಯತೆಯ ಅನುಭವಗಳು ಇಂದಿಗೂ ನಮ್ಮನ್ನು ಮಾನವೀಯರನ್ನಾಗಿ ಉಳಿಸಿವೆ. ವಿವಿಧ ಧರ್ಮಗಳ ಸ್ನೇಹಿತರು, ಬೇರೆ ಭಾಷೆಗಳ ಪರಿಚಯ, ಹಬ್ಬಗಳ ಸಂಭ್ರಮ, ಒಟ್ಟಾಗಿ ಬೆಳೆದ ನೆನಪುಗಳು ಸಮಾಜದ ಮೇಲಿನ ನಮ್ಮ ನಂಬಿಕೆಯನ್ನು ಗಟ್ಟಿಗೊಳಿಸಿವೆ. ಅದೇ ಅನುಭವವನ್ನು ನಮ್ಮ ಮಕ್ಕಳಿಗೂ ನೀಡುವುದು ಇಂದಿನ ಪೋಷಕರ ಜವಾಬ್ದಾರಿ.

ಇಂದು ಅಗತ್ಯವಿರುವುದು ವಿಭಜನೆಯ ಶಿಕ್ಷಣವಲ್ಲ. ಒಗ್ಗಟ್ಟಿನ ಶಿಕ್ಷಣ. ಮಕ್ಕಳನ್ನು ಒಂದೇ ಗುರುತಿನೊಳಗೆ ಸೀಮಿತಗೊಳಿಸುವುದಕ್ಕಿಂತ, ವೈವಿಧ್ಯತೆಯ ಮಧ್ಯೆ ಬೆಳೆಸುವ ಶಿಕ್ಷಣ ವ್ಯವಸ್ಥೆಯನ್ನು ಸಮಾಜ ಪ್ರೋತ್ಸಾಹಿಸಬೇಕು. ಏಕೆಂದರೆ ನಾಳೆಯ ಭಾರತವನ್ನು ಕಟ್ಟಬೇಕಿರುವವರು ಇಂದಿನ ಮಕ್ಕಳು. ಅವರು ಧರ್ಮ, ಜಾತಿ, ಭಾಷೆಯ ಗೋಡೆಗಳನ್ನು ದಾಟಿ ನಾವು ಎಂಬ ಭಾವನೆಯೊಂದಿಗೆ ಬೆಳೆಯಬೇಕಾದರೆ, ಅದರ ಆರಂಭ ಶಾಲೆಯ ತರಗತಿಗಳಲ್ಲಿಯೇ ಆಗಬೇಕು.

-ಅಲೀಲ್ ಅಕ್ಬರ್, ಸಕಲೇಶಪುರ

ಅರ್ಚರ್ ಆಟ: ಪ್ಲೇ ಆಫ್‌ಗೆ ರಾಜಸ್ಥಾನ ರಾಯಲ್ಸ್

ಪಂಜಾಬ್ ಕಿಂಗ್ಸ್-ಕೋಲ್ಕತ್ತಾ ನೈಟ್ ರೈಡರ್ಸ್‌ಗೆ ನಿರಾಸೆ: ಮುಂಬೈಗೆ 9ನೇ ಸ್ಥಾನ

• ಪ್ರಜೋದಯ ವರದಿ

ಮುಂಬೈ: ಆತಿಥೇಯ ಮುಂಬೈ ಇಂಡಿಯನ್ಸ್ ವಿರುದ್ಧದ ನಿರ್ಣಾಯಕ ಪಂದ್ಯದಲ್ಲಿ ಜಯ ಸಾಧಿಸಿದ ರಾಜಸ್ಥಾನ ರಾಯಲ್ಸ್, ಈ ಬಾರಿಯ ಐಪಿಎಲ್ ಆವೃತ್ತಿಯಲ್ಲಿ ಪ್ಲೇ ಆಫ್ ತಲುಪಿತು. ಕಳೆದ ಬಾರಿಯ ರನ್ನರ್ಸ್ ಅಪ್ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್‌ರೈಡರ್ಸ್ ತಂಡಗಳ ಪ್ರಶಸ್ತಿ ಕನಸು ಕಮರಿತು.



■ ಕ್ವಾಲಿಫೈಯರ್ 1 ಧರ್ಮಶಾಲಾದಲ್ಲಿ ಮೇ 26ರಂದು

■ ಎಲಿಮಿನೇಟರ್ ಮುಲ್ಲನಪುರದಲ್ಲಿ ಮೇ 27ರಂದು

■ ಕ್ವಾಲಿಫೈಯರ್ 2 ಮುಲ್ಲನಪುರದಲ್ಲಿ ಮೇ 29ರಂದು

■ ಫೈನಲ್ ಅಹಮದಾಬಾದ್‌ನಲ್ಲಿ ಮೇ 31ರಂದು

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ, ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 205 ರನ್ ಕಲೆ ಹಾಕಿತ್ತು. ಈ ಗುರಿ ಬೆನ್ನತ್ತಿದ ಮುಂಬೈ, ನಿಗದಿತ ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 175 ರನ್ ಗಳಿಸಲಷ್ಟೇ ಶಕ್ತವಾಯಿತು. ಇದರೊಂದಿಗೆ, 30 ರನ್ ಅಂತರದ ಜಯ ಸಾಧಿಸಿದ ರಾಜಸ್ಥಾನ ಪಡೆ ನಾಲ್ಕನೇ ತಂಡವಾಗಿ ಪ್ಲೇಆಫ್ ತಲುಪಿತು.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ರಾಯಲ್ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ಇದಕ್ಕುತ್ತರವಾಗಿ ಮುಂಬೈ ಇಂಡಿಯನ್ಸ್ ತಂಡ ಅಷ್ಟೇ ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 175 ರನ್ ಗಳನ್ನಷ್ಟೇ ಪೇರಿಸಲು ಶಕ್ತವಾಯಿತು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ರಾಜಸ್ಥಾನ ರಾಯಲ್ಸ್ ತಂಡ ಅಂದುಕೊಂಡ ರೀತಿಯಲ್ಲಿ ನಡೆಯಲಿಲ್ಲ. ಉತ್ತಮವಾಗಿ ಆಡುತ್ತಿದ್ದ ಯಶಸ್ವಿ ಜೈಸ್ವಾಲ್ (17 ಎಸೆತದಲ್ಲಿ 27 ರನ್) ಮತ್ತು ಸೆಟ್ ಆಗಲು ಯತ್ನಿಸುತ್ತಿದ್ದ ವೈಭವ್ ಸೂರ್ಯವಂಶಿ(6 ಎಸೆತ ದಲ್ಲಿ 4 ರನ್) ಅವರನ್ನು ಪವರ್ ಪ್ಲೇ ಮುಗಿ ಯುವುದರೊಳಗಾಗಿ ಪೆವಿಲಿಯನ್ ಗಟ್ಟಲು ಮುಂಬೈ ಇಂಡಿಯನ್ಸ್ ಯಶಸ್ವಿಯಾಯಿತು. ಪವರ್ ಪ್ಲೇನಲ್ಲೇ ಸ್ಪಿನ್ನರ್ ವಿಲ್ ಜಾಕ್ಸ್ ಅವರನ್ನು ಬೌಲಿಂಗ್‌ಗೆ ಇಳಿಸಿ ಹಾರ್ದಿಕ್ ಪಾಂಡ್ಯ ಯಶಸ್ವಿಯಾದರು.

ಆದರೆ ಧ್ರುವ ಜ್ಯುರೆಲ್(26 ಎಸೆತದಲ್ಲಿ 38 ರನ್), ದಸುನ್ ಶನುಕ (15 ಎಸೆತದಲ್ಲಿ 29 ರನ್), ಜೋಫ್ರಾ ಆರ್ಚರ್ (15 ಎಸೆತದಲ್ಲಿ 32 ರನ್), ರವೀಂದ್ರ ಜಡೇಜಾ (11 ಎಸೆತದಲ್ಲಿ ನಾಟೌಟ್ 19 ರನ್) ಅವರು ಉತ್ತಮ ಪ್ರದರ್ಶನ ನೀಡಿದ್ದರಿಂದ ತಂಡದ ಮೊತ್ತ 200 ದಾಟಿತು. ಮುಂಬೈ ಇಂಡಿಯನ್ಸ್ ಪರ ದೀಪಕ್ ಚಾಹರ್ ಮತ್ತು ಶಾರ್ದೂಲ್ ಠಾಕೂರ್ ತಲಾ 2 ವಿಕೆಟ್ ಗಳಿಸಿದರು. ವಿಲ್ ಜಾಕ್ಸ್ ತಲಾ 1 ವಿಕೆಟ್ ಗಳಿಸಿದರು.

ಮುಂಬೈ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ಸೋತರೆ, ಪ್ಲೇಆಫ್ ಪ್ರವೇಶಿಸಬಹುದು ಎಂಬ ನಿರೀಕ್ಷೆಯಲ್ಲಿದ್ದ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳಿಗೆ ನಿರಾಸೆಯಾಗಿದೆ.

ಪಂಜಾಬ್ ತಂಡ ಲೀಗ್ ಹಂತದಲ್ಲಿ ಆಡಿರುವ 14 ಪಂದ್ಯಗಳ ಪೈಕಿ ಏಳರಲ್ಲಿ ಗೆದ್ದು, ಆರರಲ್ಲಿ ಸೋತಿದೆ. 13 ಪಂದ್ಯಗಳನ್ನು ಆಡಿರುವ ಕೋಲ್ಕತ್ತಾ, ತಲಾ ಆರು ಗೆಲುವು ಮತ್ತು ಸೋಲು ಕಂಡಿದೆ. ಉಭಯ ತಂಡಗಳ ನಡುವಣ ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿದ್ದರಿಂದ, ಒಂದೊಂದು ಪಾಯಿಂಟ್ ಹಂಚಿಕೊಂಡಿವೆ. ಹೀಗಾಗಿ, ಕಿಂಗ್ಸ್ ಮತ್ತು ರೈಡರ್ಸ್ ಬಳಿ ಕ್ರಮವಾಗಿ 15 ಹಾಗೂ 13 ಪಾಯಿಂಟ್‌ಗಳಿವೆ. ಕೋಲ್ಕತ್ತಾ ತನ್ನ ಪಾಲಿನ ಇನ್ನೊಂದು ಪಂದ್ಯದಲ್ಲಿ ಭಾನುವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆಡುತ್ತಿದೆ.

ರಾಯಲ್ಸ್ ಪಡೆ ಲೀಗ್ ಹಂತದಲ್ಲಿ ಆಡಿರುವ 14 ಪಂದ್ಯಗಳ ಪೈಕಿ 8ರಲ್ಲಿ ಗೆಲುವು ಸಾಧಿಸಿರುವುದರಿಂದ 16 ಪಾಯಿಂಟ್ ಸಂಪಾದಿಸಿ ನಾಲ್ಕನೇ ಸ್ಥಾನಕ್ಕೇರಿದೆ. ಅದರಿಂದಾಗಿ, ಕಿಂಗ್ಸ್ ಮತ್ತು ರೈಡರ್ಸ್ ತಂಡಗಳು ಪ್ಲೇಆಫ್ ರೇಸ್‌ನಿಂದ ಹೊರ ಬೀಳುವಂತಾಗಿದೆ.

ಬೆಂಗಳೂರಿಗೆ ಗುಜರಾತ್-ಹೈದರಾಬಾದ್‌ಗೆ ರಾಜಸ್ಥಾನ ಎದುರಾಳಿ

ಲೀಗ್ ಹಂತದ 14 ಪಂದ್ಯಗಳಲ್ಲಿ ತಲಾ 9 ಜಯ ಸಾಧಿಸಿ, ಪಾಯಿಂಟ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ತಂಡಗಳು ಕ್ವಾಲಿಫೈಯರ್ 1 ಪಂದ್ಯದಲ್ಲಿ ಸೆಣಸಾಡಲಿವೆ.

9 ಪಂದ್ಯಗಳನ್ನು ಗೆದ್ದಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು 8 ಪಂದ್ಯ ಜಯಿಸಿರುವ ರಾಜಸ್ಥಾನ ಎಲಿಮಿನೇಟರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಕ್ವಾಲಿಫೈಯರ್ 1 ಸೆಣಸಾಟದಲ್ಲಿ ಗೆದ್ದವರು ನೇರವಾಗಿ ಫೈನಲ್ ತಲುಪಿದರೆ, ಸೋತವರು ಎಲಿಮಿನೇಟರ್ ಪಂದ್ಯದಲ್ಲಿ ಗೆದ್ದವರೊಂದಿಗೆ ಕ್ವಾಲಿ ಫೈಯರ್ 2 ಹಣಾಹಣಿಯಲ್ಲಿ ಮುಖಾ ಮುಖಿಯಾಗಲಿದ್ದಾರೆ.

ಅಮೇರಿಕಾ-ಇರಾನ್: ಮತ್ತೊಂದು ಸುತ್ತಿನ ಮಾತುಕತೆಗೆ ಆತಿಥ್ಯ ವಹಿಸಲು ಪಾಕಿಸ್ತಾನ ಸಜ್ಜು

• ಪ್ರಜೋದಯ ವರದಿ

ಇಸ್ಲಾಮಾಬಾದ್: ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆ ಶಮನಗೊಳಿಸುವ ನಿಟ್ಟಿನಲ್ಲಿ ಇರಾನ್ ಮತ್ತು ಅಮೇರಿಕಾ ನಡುವೆ ಮತ್ತೊಂದು ಸುತ್ತಿನ ಶಾಂತಿ ಮಾತುಕತೆಗೆ ಆತಿಥ್ಯ ವಹಿಸಲು ಪಾಕಿಸ್ತಾನ ಉತ್ಸುಕವಾಗಿದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಭಾನುವಾರ ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಡೆಸುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿರುವ ಷರೀಫ್, ಯುದ್ಧಪೀಡಿತ ಪ್ರದೇಶದಲ್ಲಿ ಶಾಂತಿ ನೆಲೆಸಲು ಪಾಕಿಸ್ತಾನ ತನ್ನ ಪ್ರಯತ್ನಗಳನ್ನು ಮುಂದುವರಿಸಲಿದೆ ಎಂದು ಭರವಸೆ ನೀಡಿದ್ದಾರೆ.

ಶನಿವಾರದಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೌದಿ ಅರೇಬಿಯಾ, ಕತಾರ್, ಟರ್ಕಿ, ಈಜಿಪ್ಟ್, ಯುಎಇ, ಜೋರ್ಡಾನ್, ಬಹ್ರೇನ್ ಮತ್ತು ಪಾಕಿಸ್ತಾನ ಸೇರಿ ಪ್ರಮುಖ ಮುಸ್ಲಿಂ ರಾಷ್ಟ್ರಗಳ ನಾಯಕರೊಂದಿಗೆ ದೂರವಾಣಿ ಮೂಲಕ ಸುದೀರ್ಘ ಚರ್ಚೆ ನಡೆಸಿದ್ದರು. ಈ ವೇಳೆ ಪಾಕಿಸ್ತಾನದ ಪರವಾಗಿ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರು ಈ ಸಂವಾದದಲ್ಲಿ ಭಾಗವಹಿಸಿದ್ದರು.



ಪ್ರಸ್ತುತ ಚೀನಾ ಪ್ರವಾಸದಲ್ಲಿರುವ ಪ್ರಧಾನಿ ಷರೀಫ್ ಅವರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಪಾಕಿಸ್ತಾನವು ಅತ್ಯಂತ ಪ್ರಾಮಾಣಿಕತೆಯಿಂದ ಈ ಪ್ರಯತ್ನ ಗಳನ್ನು ಮುಂದುವರಿಸಲಿದ್ದು, ಶೀಘ್ರದಲ್ಲೇ ಮುಂದಿನ ಸುತ್ತಿನ ಮಾತುಕತೆಗೆ ಆತಿಥ್ಯ ವಹಿಸುವ ನಿರೀಕ್ಷೆಯಿದೆ ಎಂದು ಬರೆದುಕೊಂಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿರುವ ಸೇನಾ ಮುಖ್ಯಸ್ಥ ಮುನೀರ್ ಅವರನ್ನು ಕೊಂಡಾಡಿದ್ದಾರೆ.

ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರು ಶನಿವಾರ ತಡರಾತ್ರಿಯವರೆಗೆ ಟೆಹರಾನ್‌ನಲ್ಲಿ ಇರಾನ್‌ನ ಉನ್ನತ ನಾಯಕರೊಂದಿಗೆ ಮಾತುಕತೆ ನಡೆಸಿ, ಅಮೇರಿಕಾ-ಇರಾನ್ ನಡುವೆ ನಿರ್ಣಾಯಕ ಒಪ್ಪಂದಕ್ಕೆ ಬರಲು ಕಸರತ್ತು ನಡೆಸಿದ್ದರು. ಇದರ ಬೆನ್ನಲ್ಲೇ ಡೊನಾಲ್ಡ್ ಟ್ರಂಪ್ ತಮ್ಮ ಟ್ರುತ್ ಸೋಷಿಯಲ್ ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಅಮೇರಿಕಾ, ಇರಾನ್ ಮತ್ತು ಇತರ ಸಂಬಂಧಿತ ದೇಶಗಳ ನಡುವಿನ ಒಪ್ಪಂದದ ಬಹುತೇಕ ಮಾತುಕತೆಗಳು ಮುಗಿದಿದ್ದು, ಅಂತಿಮ ಹಂತದ ಸಹಿ ಬಾಕಿ ಇದೆ ಎಂದು ಬರೆದುಕೊಂಡಿದ್ದರು.

ಇದೇ ವೇಳೆ ತಮಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೂ ಸಕಾರಾತ್ಮಕ ಮಾತುಕತೆ ನಡೆದಿದೆ ಎಂದು ತಿಳಿಸಿರುವ ಟ್ರಂಪ್, ಒಪ್ಪಂದದ ಮಾಹಿತಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದಿದ್ದಾರೆ.

ಫೆಬ್ರುವರಿ 28ರಂದು ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸಿದ ದಾಳಿ ಹಾಗೂ ಅದಕ್ಕೆ ಪ್ರತಿಯಾಗಿ ಇರಾನ್ ನಡೆಸಿದ ಪ್ರತಿದಾಳಿಯಿಂದಾಗಿ ಜಾಗತಿಕವಾಗಿ ಇಂಧನ ಬಿಕ್ಕಟ್ಟು ತಲೆದೋರಿತ್ತು. ಜಗತ್ತಿನ ಐದನೇ ಒಂದು ಭಾಗದಷ್ಟು ಇಂಧನ ಸರಬರಾಜಾಗುವ ಹೊರ್ಮುಜ್ ಜಲಮಾರ್ಗದಲ್ಲಿ ಹಡಗು ಸಂಚಾರ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತ್ತು. ಏ.8ರಿಂದ ಕದನ ವಿರಾಮ ಜಾರಿಯಲ್ಲಿದ್ದರೂ ಸಹಜ ಸ್ಥಿತಿಗೆ ಮರಳಲಿಲ್ಲ.

ಫಾಲ್ಟಾದಲ್ಲಿ ಬಿಜೆಪಿ ಅಭ್ಯರ್ಥಿಗೆ ಅಧಿಕ ಮತಗಳ ಅಂತರದ ಜಯ

• ಪ್ರಜೋದಯ ವರದಿ

ಫಾಲ್ಟಾ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ದೇಭಾಂಶು ಪಾಂಡಾ ಅವರು ಒಂದು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಅಕ್ರಮಗಳು ನಡೆದಿವೆ ಎಂಬ ಆರೋಪದ ಹಿನ್ನಲೆಯಲ್ಲಿ ಫಾಲ್ಟಾ ಕ್ಷೇತ್ರಕ್ಕೆ ಮೇ 21ರಂದು ಮರುಮತದಾನ ನಡೆದಿತ್ತು. ಶೇ.88ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದರು.

ಇಂದು (ಭಾನುವಾರ) ಮತ ಎಣಿಕೆ ನಡೆದಿದ್ದು, ಪಾಂಡಾ 1,09,021 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಅವರಿಗೆ ಒಟ್ಟು 1,49,666 ಮತಗಳು ಲಭಿಸಿವೆ. ಅವರ ಸಮೀಪದ ಸ್ಪರ್ಧಿಯಾಗಿದ್ದ ಸಿಪಿಐ(ಎಂ)ನ ಶಂಭುನಾಥ್ ಕುರ್ಮಿ 40,645 ಮತಗಳನ್ನು ಪಡೆದುಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಅಬ್ದುರ್ ರಜಾಕ್ ಮೊಲ್ಲಾ, 10,084 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ಎರಡು ಹಂತಗಳಲ್ಲಿ ನಡೆದಿತ್ತು. 152 ಕ್ಷೇತ್ರಗಳಿಗೆ ಏಪ್ರಿಲ್ 23ರಂದು ಮೊದಲ ಹಂತ ಹಾಗೂ ಫಾಲ್ಟಾ ಸೇರಿ ಉಳಿದ 142 ಕ್ಷೇತ್ರಗಳಿಗೆ ಏಪ್ರಿಲ್ 29ರಂದು ಎರಡನೇ ಹಂತದ ಮತದಾನವಾಗಿತ್ತು.

ಫಾಲ್ಟಾದಲ್ಲಿ ಏಪ್ರಿಲ್ 29ರಂದು ನಡೆದ ಮತದಾನದ ವೇಳೆ ಚುನಾವಣಾ ಅಕ್ರಮಗಳು ನಡೆದಿವೆ ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಮರು ಚುನಾವಣೆ ಘೋಷಿಸಿತ್ತು. ಆದರೆ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಜಹಾಂಗೀರ್ ಖಾನ್ ಅವರು ಮರುಮತದಾನಕ್ಕೆ ಇನ್ನು ಎರಡು ದಿನಗಳು ಬಾಕಿ ಇದ್ದಾಗ ಕಣದಿಂದ ಹಿಂದೆ ಸರಿದಿದ್ದರು. ಆದಾಗ್ಯೂ ಅವರಿಗೆ 7,783 ಜನರು ಮತ ನೀಡಿದ್ದಾರೆ.

ಬಿಜೆಪಿ ಬಲ 208ಕ್ಕೆ

294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಟಿಎಂಸಿ ಮುಖಭಂಗ ಅನುಭವಿಸಿತ್ತು. 2021 ರಲ್ಲಿ 215 ಕ್ಷೇತ್ರಗಳಲ್ಲಿ ಗೆದ್ದು ಸತತ ಮೂರನೇ ಅವಧಿಗೆ ಅಧಿಕಾರ ಹಿಡಿದಿದ್ದ ಮಮತಾ ಬ್ಯಾನರ್ಜಿ ಅವರ ಪಕ್ಷ, ಈ ಬಾರಿ 80 ಸ್ಥಾನಗಳಿಗೆ ಕುಸಿದಿದೆ. 207 ಕ್ಷೇತ್ರಗಳಲ್ಲಿ ಜಯ ಸಾಧಿಸುವ ಮೂಲಕ ಭಾರಿ ಬಹುಮತ ಗಳಿಸಿದ್ದ ಬಿಜೆಪಿ, ಇದೇ ಮೊದಲ ಬಾರಿಗೆ ಬಂಗಾಳದಲ್ಲಿ ಸರ್ಕಾರ ರಚಿಸಿದೆ. ಇದೀಗ ಫಾಲ್ಟಾದಲ್ಲಿ ಗೆಲ್ಲುವುದರೊಂದಿಗೆ ಸಂಖ್ಯಾಬಲ 208ಕ್ಕೆ ಏರಿದೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಆರೋಪಿ ಶುಭಂ ಜೂನ್ 6ರವರೆಗೆ ನ್ಯಾಯಾಂಗ ವಶಕ್ಕೆ

ನವದೆಹಲಿ: ನೀಟ್‌ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾ ಗಿರುವ ಆರೋಪಿ ಶುಭಂ ಖೈರ್‌ನಾರ್‌ನನ್ನು ದೆಹಲಿ ನ್ಯಾಯಾಲಯ ಭಾನುವಾರ ಜೂನ್ 6ರ ವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ.

ಸಂಘಟಿತ ತಂಡವೊಂದು ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಿದ್ದು, ಅದರಲ್ಲಿ ಆರೋಪಿ ಶುಭಂ ಕೈವಾಡವೂ ಇದೆ ಎನ್ನುವ ಆರೋಪಕ್ಕಾಗಿ ಬಂಧಿಸಲಾಗಿತ್ತು. ಸಿಬಿಐ ವಶದಲ್ಲಿರುವ ಅವಧಿ ಪೂರ್ಣಗೊಂಡಿರುವ ಕಾರಣ ಆರೋಪಿಯನ್ನು ನ್ಯಾಯಾಂಗ ವಶಕ್ಕೆ ನೀಡಬೇಕೆಂದು ಕೋರಿ ಸಿಬಿಐ ಮನವಿ ಮಾಡಿತ್ತು.

ವಿಶೇಷ ನ್ಯಾಯಾಧೀಶರಾದ ರುಚಿ ಅಗರ್ವಾಲ್ ಅವರು ಸಿಬಿಐ ಮನವಿ ಪುರಸ್ಕರಿಸಿ, ಆರೋಪಿಯನ್ನು ಜೂನ್ 6ರ ವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ದಂತೆ ಬಂಧನಕ್ಕೀಡಾಗಿರುವ ಇತರೆ ಐವರು ಆರೋಪಿಗಳ ಸಿಬಿಐ ವಶದ ಅವಧಿಯೂ ಸೋಮವಾರ ಮುಕ್ತಾಯಗೊಳ್ಳಲಿದ್ದು, ಅವರನ್ನೂ ಸೋಮವಾರ ನ್ಯಾಯಾಲಯಕ್ಕೆ ಹಾಜರು ಪಡಿಸುವ ನಿರೀಕ್ಷೆ ಇದೆ.

ಗಾಂಜಾ ಸೇವನೆ ಮಾರಾಟ ತಡೆಗೆ ಮಕ್ಕಳ ಮೇಲೆ ನಿಗಾ ಇರಲಿ

• ಪ್ರಜೋದಯ ವರದಿ

ಅರಸೀಕೆರೆ: ಗಾಂಜಾ ಸೇವನೆ ಮತ್ತು ಮಾರಾಟವನ್ನು ಬೇರು ಸಮೇತ ಕಿತ್ತು ಹಾಕಲು ಎಲ್ಲರ ಸಹಕಾರ ಅತಿ ಮುಖ್ಯ. ಪೋಷಕರು, ಪ್ರಾಧ್ಯಾಪಕರು ಪ್ರತಿ ದಿನ ವಿದ್ಯಾರ್ಥಿಗಳ ಮೇಲೆ ನಿಗಾ ವಹಿಸಬೇಕೆಂದು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಕಿರಣ್ ಕುಮಾರ್ ಡಿ ವಡಿಗೇರಿ ಹೇಳಿದರು.

ನಗರದ ಹೊಯ್ಸಳೇಶ್ವರ ಕಾಲೇಜು ಆವರಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಕ್ರೀಡಾ ಚಟುವಟಿ ಕೆಗಳ ಸಮಾರೋಪ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು, ಪ್ರಾಧ್ಯಾಪಕರು ಮಕ್ಕಳ ಚಟುವಟಿಕೆಗಳ ಬಗ್ಗೆ ಗಮನ ಹರಿಸಬೇಕಿದೆ. ಗಾಂಜಾ ಸೇವನೆ ಮತ್ತು ಮಾರಾಟದ ಬಗ್ಗೆ ನಿಮ್ಮ ಗಮನಕ್ಕೆ ಬಂದ ಕೂಡಲೇ ನ್ಯಾಯಾಲಯದ ಗಮನಕ್ಕೆ ತಂದರೆ ನಾವು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪೊಲೀಸ್ ಇಲಾಖೆಗೆ ಸೂಚಿಸುತ್ತೇವೆ. ಮಾಹಿತಿ ನೀಡಿದವರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು, ಇದಕ್ಕೆ ಎಲ್ಲರ ಸಹಕಾರ ಮುಖ್ಯ ಎಂದರು.

ಸಮಾಜದ ಪ್ರತಿಯೊಬ್ಬರೂ ಜಾಗೃತರಾದರೆ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ. ಅರಸೀಕೆರೆ ನಗರದಲ್ಲಿ ಗಾಂಜಾ ಸೇವನೆ ಮತ್ತು ಮಾರಾಟ ವ್ಯಾಪಕವಾಗಿ ಹೆಚ್ಚಾಗುತ್ತಿದೆ. ತಿಂಗಳಿಗೆ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗುತ್ತಿವೆ. ಈ ವಿಷಯ ಕಳವಳಕ್ಕೆ ಕಾರಣವಾಗಿದೆ. ನಮ್ಮ ಮುಖ್ಯ ಜವಾಬ್ದಾರಿ ಗಾಂಜಾ ಸೇವನೆ ಮತ್ತು ಮಾರಾಟವನ್ನು ಬೇರು ಸಮೇತ ಕಿತ್ತು ಹಾಕುವುದು ಎಂದು ಹೇಳಿದರು.

ಆಕಾಶವಾಣಿ ಕಾರ್ಯಕ್ರಮ ನಿರ್ವಹಣಾ ಅಧಿಕಾರಿ ಅರಕಲಗೂಡು ಬಿ.ಮಧುಸೂದನ್ ಅವರು ಮಾತನಾಡಿ, ವಿದ್ಯಾರ್ಥಿಗಳು ಓದು ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಯಶಸ್ಸನ್ನು ಸಾಧಿಸಬೇಕು. ಒಳ್ಳೆಯ ವಿಚಾರ ತಿಳಿಯಲು, ಜ್ಞಾನಾರ್ಜನೆ ವೃದ್ಧಿಸಿಕೊಳ್ಳಲು ಅತಿ ಹೆಚ್ಚು ಪುಸ್ತಕಗಳನ್ನು ಓದಬೇಕೆಂದು ಹೇಳಿದರು.

ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಸಿರಿಗೆರೆ ಕೇಂದ್ರ ಆಡಳಿತ ಮಂಡಳಿಯ ಸದಸ್ಯ ಎಚ್.ಜಿ.ರೇವಣ್ಣ, ಕಾಲೇಜಿನ ಸಲಹಾ ಸಮಿತಿ ಅಧ್ಯಕ್ಷ ಜಿ.ಬಿ.ಶಶಿಧರ್, ತರಳಬಾಳು ವಿದ್ಯಾ ಸಂಸ್ಥೆಯ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಬಿ.ಮಹಾಲಿಂಗಪ್ಪ, ಕಲ್ಪತರು ಶಿಕ್ಷಣ ಮಹಾ ವಿದ್ಯಾಲಯ ಪ್ರಾಂಶುಪಾಲ ಎಂ.ಬಿ.ಮಲ್ಲಿಕಾರ್ಜುನ, ಹೊಯ್ಸಳೇಶ್ವರ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎ.ಎಸ್.ವಸಂತ ಕುಮಾರ್, ಶಶಿವಾಳ ಗಂಗಾಧರ್, ನೇರ್ಲಿಗೆ ಸೋಮಶೇಖರ್, ಫಿಜಿಯೋಥೆರಪಿ ಮಧು, ಪ್ರಾಧ್ಯಾಪಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಲೂಚಿಸ್ತಾನದಲ್ಲಿ ಬಂದ್ ಆಗಿದ್ದ 3,700 ಶಾಲೆಗಳು ಆರಂಭ

7.17 ಲಕ್ಷ ಮಕ್ಕಳು ದಾಖಲು

• ಪ್ರಜೋದಯ ವರದಿ

ಕ್ವೆಟ್ಟಾ: ಪ್ರಾಂತೀಯ ಸರ್ಕಾರ ಕೈಗೊಂಡ ಶೈಕ್ಷಣಿಕ ಸುಧಾರಣಾ ಕ್ರಮಗಳು ಸಕಾರಾತ್ಮಕ ಫಲಿತಾಂಶ ನೀಡುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ಸುಮಾರು 7.17 ಲಕ್ಷ ಮಕ್ಕಳು ಸರ್ಕಾರಿ ಶಾಲೆಗಳಿಗೆ ದಾಖಲಾಗಿದ್ದಾರೆಂದು ಬಲೂಚಿಸ್ತಾನ ಮುಖ್ಯಮಂತ್ರಿ ಮೀರ್ ಸರ್ಫರಾಜ್ ಬುಗ್ತಿ ತಿಳಿಸಿದ್ದಾರೆ.

ಸುಧಾರಣಾ ಕ್ರಮಗಳ ಪರಿಣಾಮವಾಗಿ, ದಾಖಲಾತಿ ಪ್ರಮಾಣ ಶೇ.11ರಷ್ಟು ಹೆಚ್ಚಾಗಿದೆ. ಹಾಗೆಯೇ, ಮಕ್ಕಳು ಅರ್ಧದಲ್ಲೇ ಶಾಲೆ ಬಿಡುವ ಪ್ರಮಾಣ ಶೇ.5ರಷ್ಟು ಕಡಿಮೆಯಾಗಿದೆ. ಇದು ಸರ್ಕಾರದ ನೀತಿಗಳು ಮತ್ತು ಸಾರ್ವಜನಿಕ ಶಿಕ್ಷಣದ ಮೇಲೆ ಜನರ ವಿಶ್ವಾಸ ಹೆಚ್ಚುತ್ತಿ ರುವುದರ ಸಂಕೇತವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬಲೂಚಿಸ್ತಾನದಾದ್ಯಂತ ಮುಚ್ಚಿಹೋಗಿದ್ದ ಸುಮಾರು 3,778 ಶಾಲೆಗಳನ್ನು ಅಭಿವೃದ್ಧಿ ಪಡಿಸಿ, ಮತ್ತೆ ಆರಂಭಿಸಲಾಗಿದೆ. ದೂರದ ಊರುಗಳ ಮತ್ತು ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಪ್ರದೇಶಗಳ ಸಾವಿರಾರು ಮಕ್ಕಳು ಶಾಲೆಗಳಿಗೆ ಮರಳಲು, ಶಿಕ್ಷಣ ಮುಂದುವರಿಸಲು ಇದರಿಂದ ಅವಕಾಶ ದೊರೆತಂತಾಗಿದೆ ಎಂದು ಬುಗ್ತಿ ತಿಳಿಸಿರುವುದಾಗಿ ವರದಿ ಮಾಡಿದೆ.

ಬಲೂಚಿಸ್ತಾನ ಹಿಂದುಳಿದಿದೆ ಎಂಬ ಹಣೆಪಟ್ಟಿಯನ್ನು ಹೋಗಲಾಡಿ ಸಲು, ಮುಂದಿನ ತಲೆ ಮಾರಿನ ಸುಸ್ಥಿರ ಅಭಿವೃದ್ಧಿಯನ್ನು ಖಾತ್ರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಗುಣ ಮಟ್ಟದ ಶಿಕ್ಷಣ ಒದಗಿಸುವುದು ನಿರ್ಣಾಯಕವಾಗಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿನ ನಿರ್ಲಕ್ಷ್ಯ, ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ತೊಡೆದುಹಾಕಲು ಸರ್ಕಾರ ಬದ್ಧವಾಗಿದೆ ಎಂದು ಬುಗ್ತಿ ಅವರು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಸಾಮರಸ್ಯದ ಬದುಕಿಗೆ ಸಂಗೀತ ಸಹಕಾರಿ

• ಪ್ರಜೋದಯ ವರದಿ

ಅರಕಲಗೂಡು: ಸಂಗೀತ ಸಾಮರಸ್ಯದ ಬದುಕಿನ ಭಾಗವಾಗಿದ್ದು ಈ ಕ್ಷಣವು ನನ್ನ ಜೀವನದ ಅವಿಸ್ಮರಣೀಯ ಕ್ಷಣವಾಗಿದೆ ಎಂದು ನಾಚಾರಮ್ಮ ಪ್ರಶಸ್ತಿ ಪುರಸ್ಕೃತ ಎ.ವಿ. ಆನಂದ್ ಅವರು ಸಂತಸ ವ್ಯಕ್ತಪಡಿಸಿದರು.

ತಾಲ್ಲೂಕಿನ ರುದ್ರಪಟ್ಟಣದ ರಾಮ ಮಂದಿರದಲ್ಲಿ ನಾಲ್ಕು ದಿನಗಳಿಂದ ರುದ್ರಪಟ್ಟಣ ಸಂಗೀತೋತವ ಸಮಿತಿ ಟ್ರಸ್ಟ್ ವತಿಯಿಂದ ಜರುಗುತ್ತಿರುವ 23ನೇ ವಾರ್ಷಿಕ ಸಂಗೀತೋತ್ಸವ ದಲ್ಲಿ ಶನಿವಾರ ರಾತ್ರಿ ನಾಚಾರಮ್ಮ ಪ್ರಶಸ್ತಿ ಮತ್ತು ಲಯಕಲಾ ಸ್ಪರ್ಶಮಣಿ ಬಿರುದು ಸ್ವೀಕರಿಸಿ ಮಾತನಾಡಿದ ಅವರು, ರುದ್ರಪಟ್ಟಣವು ಸಂಗೀತ ಕ್ಷೇತ್ರಕ್ಕೆ ಅನೇಕ ಅಪರೂಪದ ಕಲಾವಿದರನ್ನು ಕೊಡುಗೆಯಾಗಿ ನೀಡಿರುವ ಪುಣ್ಯ ಕ್ಷೇತ್ರವಾಗಿದೆ. ರುದ್ರಪಟ್ಟಣ ಸಂಗೀತೋತ್ಸವ ಸಮಿತಿಯು ವಾರ್ಷಿಕ ಸಂಗೀತೋತ್ಸವದ ಮೂಲಕ ರುದ್ರಪಟ್ಟಣದ ಸಂಗೀತದ ಪರಂಪರೆಯನ್ನು ಮುನ್ನಡೆಸುತ್ತಿರುವುದು ಅತ್ಯಂತ ಮಹತ್ವದ ಕೆಲಸ ಎಂದರು.

ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್ ನಿರ್ವಾಹಕ ವಿಶ್ವಸ್ಥ, ಗಾನಕಲಾಭೂಷಣ ವಿದ್ವಾನ್ ಆರ್.ಕೆ.ಪದ್ಮನಾಭ ಅವರು ಮಾತನಾಡಿ, ವಿದ್ವಾಂಸರಿಗೆ ಏನು ಬಹುಮಾನ ನೀಡಿದರೂ ಕಡಿಮೆಯೇ. ವಿದ್ವಾಂಸರಲ್ಲಿನ ವಿದ್ವತ್ ಮತ್ತು ಪ್ರಾವೀಣ್ಯತೆಯನ್ನು ಗೌರವಿಸುವುದು ನಮ್ಮ ಸಮಿತಿಯ ಮೂಲ ಉದ್ದೇಶವಾಗಿದೆ ಎಂದರು.

ಸಂಗೀತ ವಿದ್ವಾಂಸರಾದ ಶೇಷಮೂರ್ತಿ, ನಾಗರತ್ನ, ಚಂದ್ರಶೇಖರ್, ಸಿ.ಎ.ನಾಗರಾಜು, ಸಿ.ಎ.ಗುರುದತ್, ಸಿ.ಎ.ಶ್ರೀಧರ್, ಸಿ.ಎ.ನಟರಾಜ್ ಮತ್ತು ಬಿ.ಎಸ್.ರಮೇಶ್ ಅವರಿಗೆ ರುದ್ರಗಾನ ಕಲಾ ವಿಶಾರದ ಬಿರುದು ಪ್ರದಾನ ಮಾಡಲಾಯಿತು. ಕರ್ನಾಟಕ ಬ್ಯಾಂಕ್ ಎಜಿಎಂ ಕಿಶೋರ್ ಕುಲಕರ್ಣಿ, ಮುಖ್ಯ ಪ್ರಬಂಧಕ ಶಶಾಂಕ್ ಹಾಗು ಇತರೆ ಸಂಗೀತ ವಿದ್ವಾಂಸರಿದ್ದರು.

ರಾಜ್ಯದಲ್ಲಿ 7 ದಿನ ಬಿರುಗಾಳಿ ಸಹಿತ ಜೋರು ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಾದ್ಯಂತ ಮುಂದಿನ 7 ದಿನಗಳ ಕಾಲ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಬಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚಿಸಿದೆ. ಮೇ 24 ರಿಂದ 30ರವರೆಗೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ.

ಉತ್ತರ ಒಳನಾಡು ಜಿಲ್ಲೆಗಳಲ್ಲಿ ಮೇ 25ರಂದು ಅಲ್ಲಲ್ಲಿ ಆಲಿಕಲ್ಲು ಮಳೆಯಾಗುವ ಮುನ್ಸೂಚನೆ ಇದೆ ಎಂದು ಇಲಾಖೆ ತಿಳಿಸಿದೆ.

ಮೇ 24ರಂದು ಯಾದಗಿರಿ, ರಾಯಚೂರು, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ರಾಮನಗರ, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗುಡುಗು, ಮಿಂಚು ಮತ್ತು ಗಾಳಿ ಸಹಿತ ಮಳೆಯಾಗಲಿದೆ. ಅದರಲ್ಲೂ ಬಾಗಲಕೋಟೆ, ಗದಗ, ಧಾರವಾಡದಲ್ಲಿ ಆಲಿಕಲ್ಲು ಮಳೆಯಾಗಲಿದೆ.

ಧರ್ಮ ಜಾಗೃತಿ ಪ್ರಚಾರಕ್ಕೆ ಮೂರನೇ ವರ್ಷದ ಸಂಭ್ರಮ

• ಪ್ರಜೋದಯ ವರದಿ

ಆಲೂರು: ಮನೆ ಮನೆಗೆ-ಮನ ಮನಕೆ ರೇಣುಕ ಧರ್ಮ ಜಾಗೃತಿ ಹಾಗು ತತ್ವ ಪ್ರಚಾರ ಕಾರ್ಯಕ್ರಮ ಮೂರು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಹಾಸನ ತಾಲ್ಲೂಕಿನ ಅಗಿಲೆ ಗ್ರಾಮ ದಲ್ಲಿರುವ ತೇಜೋದಯ ನಿರಾಶ್ರಿತರ ಆಶ್ರಮದಲ್ಲಿ ಸರಳ ಸಂಭ್ರಮಾಚರಣೆ ನಡೆಯಿತು.

ಸಂಸ್ಥಾನ ಹಿರೇಮಠ ಹಾಗು ಸಿದ್ಧಾಂತ ಶಿಖಾಮಣಿ ತತ್ವ ಪ್ರಸಾರ ಅಭಿಯಾನ ಸಮಿತಿಯಿಂದ ನಡೆಯುತ್ತಿರುವ ಅಭಿಯಾನ 36 ಸಂಚಿಕೆ ಪೂರೈಸಿದ್ದು ಸಮಾಜದಲ್ಲಿ ಧಾರ್ಮಿಕ ಮೌಲ್ಯ, ಸನಾತನ ಸಂಸ್ಕೃತಿ, ವೀರಶೈವ ಸಿದ್ಧಾಂತ ಹಾಗು ಮಾನವೀಯತೆ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

ಸಮಾರಂಭ ಅಂಗವಾಗಿ ಆಶ್ರಮದಲ್ಲಿರುವ ನಿರಾಶ್ರಿತರಿಗೆ ಹಾಗು ಅಗತ್ಯವಿರುವ ವರಿಗೆ ತರಕಾರಿ, ಅಕ್ಕಿ, ಬೇಳೆ, ಎಣ್ಣೆ ಸೇರಿ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಲಾಯಿತು.

ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಮಾನವ ಸೇವೆಯೇ ಮಹಾ ದೇವನ ಸೇವೆಯಾಗಿದೆ. ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದರು. ಧರ್ಮ ಪ್ರಚಾರದ ಜೊತೆಗೆ ದೀನ ದಲಿತರ, ನಿರಾಶ್ರಿತರ ಹಾಗು ಅಗತ್ಯವಿರುವವರಿಗೆ ನೆರವಾಗುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು. ಆಶ್ರಮದ ಸ್ಥಾಪಕ ಗಿರಿತೇಜ್, ನಿರಾಶ್ರಿತರು ಹಾಜರಿದ್ದರು.

ದಿಡಗ ಪ್ರಾಥಮಿಕ ಕೃಷಿ ಪತ್ತಿನ ಸಂಘಕ್ಕೆ ಮಹೇಶ್ ಉಪಾಧ್ಯಕ್ಷ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ದಿಡಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ಉಳ್ಳಾವಳ್ಳಿ ಗ್ರಾಮದ ಹೆಚ್.ಎಸ್. ಮಹೇಶ್ ಅವಿರೋಧ ಆಯ್ಕೆಯಾದರು.

ಇತ್ತೀಚೆಗೆ ತೆರವಾಗಿದ್ದ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ಜರುಗಿತು. ಹೆಚ್.ಎಸ್.ಮಹೇಶ್ ಹೊರತು ಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ಘೋಷಿಸಲಾ ಯಿತು.

ನೂತನ ಉಪಾಧ್ಯಕ್ಷ ಹೆಚ್.ಎಸ್. ಮಹೇಶ್ ಅವರು ಮಾತನಾಡಿ, ಕಿರಿಯ ಕಾರ್ಯಕರ್ತ ರನ್ನು ಗುರುತಿಸಿ ಸ್ಥಾನಮಾನಗಳನ್ನು ನೀಡಿ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿರುವ ಹೆಗ್ಗಳಿಕೆಯು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಸಲ್ಲುತ್ತದೆಂದರು.

ಕೇವಲ 10 ಗುಂಟೆ ಜಮೀನು ಹೊಂದಿರುವ ರೈತನಿಗೂ ಸಹ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಮೂಲಕ ರೈತ ವರ್ಗವನ್ನು ಮೇಲೆತ್ತುವ ಕಾರ್ಯದಲ್ಲಿ ಶ್ರಮಿಸುತ್ತಿರುವ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಕಾರ್ಯವೈಖರಿಯು ಶ್ಲಾಘನೀಯವಾದುದು. ಸುಮಾರು 25 ವರ್ಷಗಳಿಂದ ತಾಲ್ಲೂಕು ವ್ಯಾಪ್ತಿಯಲ್ಲಿ ವಾಡಿಕೆಯಂತೆ ಮಳೆಯಾಗದ ಕಾರಣ ಕೆರೆ- ಕಟ್ಟೆಗಳು ನೀರಿಲ್ಲದೆ ಒಣಗುತ್ತಿವೆ. ಅಂತರ್ಜಲ ಮಟ್ಟ ಕುಸಿದಿದ್ದು ರೈತರ ಬದುಕು ಚಿಂತಾಜನಕವಾಗಿತ್ತು. ಶಾಸಕ ಸಿ.ಎನ್. ಬಾಲಕೃಷ್ಣ ಅವರು ಏತ ನೀರಾವರಿ ಯೋಜನೆಯಡಿ ಕಳೆದ 3-4 ವರ್ಷಗಳಿಂದ ತಾಲ್ಲೂಕು ವ್ಯಾಪ್ತಿಯ ನೂರಾರು ಕೆರೆ-ಕಟ್ಟೆಗಳಿಗೆ ನೀರು ತುಂಬಿಸುತ್ತಿರುವ ಪರಿಣಾಮ ತಾಲ್ಲೂಕಿನ ರೈತರು ನೆಮ್ಮದಿಯಾಗಿದ್ದಾರೆಂದರು.

ಸಂಘವು 11 ನಿರ್ದೇಶಕರನ್ನು ಹೊಂದಿದೆ. ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಯಾದ ಹೆಚ್.ಎಸ್.ಮಹೇಶ್ ಅವರನ್ನು ಅಭಿನಂದಿಸಲಾಯಿತು. ಜೆಡಿಎಸ್ ಹಿರಿಯ ನಾಯಕರು ಹಾಗು ಕಾರ್ಯಕರ್ತರು ಅಭಿನಂದಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಪುಟ್ಟರಾಜು, ಎಂ.ಆರ್. ವಾಸು, ಎಪಿಎಂಸಿ ಮಾಜಿ ಅಧ್ಯಕ್ಷ ರಘುರಾಮ್, ಸಂಘದ ಅಧ್ಯಕ್ಷ ಹೆಚ್.ಕೆ.ಯೋಗೇಶ್, ಮಾಜಿ ಅಧ್ಯಕ್ಷ ತಾತೇಗೌಡ, ಮಾಜಿ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಮಧು, ಮಲ್ಲೇಗೌಡ, ವೆಂಕಟೇಶ್, ಬಾಲು, ತುಳಸಿ, ಪ್ರಮುಖರಾದ ಜೆ.ಎಸ್. ಮಂಜುನಾಥ್, ಜೆ.ಜೆ.ಧನಂಜಯ, ಜೆ.ಡಿ.ಮಂಜುನಾಥ್, ಸಂಘದ ಕಾರ್ಯನಿರ್ವಹಣಾಧಿಕಾರಿ ನಿಂಗಮ್ಮ ಹಾಗು ಇತರರಿದ್ದರು.

ವಿದ್ಯಾರ್ಥಿಗಳು ಭರಿಸಿದ್ದ ಹೆಚ್ಚುವರಿ ಶುಲ್ಕ ಶೀಘ್ರವೇ ವಾಪಸ್: ಸಿಬಿಎಸ್‌ಇ

• ಪ್ರಜೋದಯ ವರದಿ

ನವದೆಹಲಿ: ತಾಂತ್ರಿಕ ದೋಷಗಳ ಕಾರಣದಿಂದಾಗಿ ಫಲಿತಾಂಶದ ನಂತರದ ಪ್ರಕ್ರಿಯೆಗಳಿಗೆ 12ನೇ ತರಗತಿ ವಿದ್ಯಾರ್ಥಿಗಳು ಪಾವತಿಸಿದ್ದ ಹೆಚ್ಚುವರಿ ಶುಲ್ಕವನ್ನು ಶೀಘ್ರವೇ ಹಿಂದಿರುಗಿ ಸುವುದಾಗಿ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಭಾನುವಾರ ತಿಳಿಸಿದೆ.

ಮರು ಮೌಲ್ಯಮಾಪನ ಸಂಬಂಧಿತ ಪ್ರಕ್ರಿಯೆಗಳ ವೇಳೆ ತಾಂತ್ರಿಕ ಸಮಸ್ಯೆಗಳು ಎದುರಾದ ಸಂಬಂಧ ವಿದ್ಯಾರ್ಥಿಗಳಿಂದ ದೂರುಗಳು ಕೇಳಿಬಂದಿದ್ದವು. ಈ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವರದಿ ನೀಡುವಂತೆ ಸಿಬಿಎಸ್‌ಇಗೆ ಸೂಚಿಸಿದ್ದರು. ಇದಾದ ಒಂದು ದಿನದ ನಂತರ ಶುಲ್ಕ ಮರುಪಾವತಿ ಹೇಳಿಕೆ ಹೊರಬಿದ್ದಿದೆ.

ಮೌಲ್ಯಮಾಪನ ಮಾಡಲಾದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಕಾಪಿಗಳಿಗಾಗಿ ವಿದ್ಯಾರ್ಥಿಗಳು ಮೇ 21 ಮತ್ತು 22ರಂದು ಅರ್ಜಿ ಸಲ್ಲಿಸಿದ ವೇಳೆ ತಾಂತ್ರಿಕ ಸಮಸ್ಯೆ ಎದುರಾಗಿತ್ತು. ಅದರಿಂದಾಗಿ ಕೆಲವರು ಹೆಚ್ಚುವರಿ ಶುಲ್ಕ ಪಾವತಿಸುವಂತಾಗಿತ್ತು ಎಂದು ಸಿಬಿಎಸ್‌ಇ ಹೇಳಿಕೆ ಬಿಡುಗಡೆ ಮಾಡಿದೆ.

ಕೆಲವರು ಹೆಚ್ಚುವರಿ ಹಣ ಪಾವತಿಸಿದ್ದಾರೆ. ಇನ್ನು ಕೆಲವರಿಗೆ ಕಡಿಮೆ ಮೊತ್ತವನ್ನು ಭರಿಸಿ ದ್ದಾರೆ. ತಾಂತ್ರಿಕ ದೋಷದಿಂದ ಹೀಗಾಗಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಶುಲ್ಕ ಪಾವತಿಗೆ ಅನುಸರಿಸಿದ್ದ ವಿಧಾನದಲ್ಲೇ ಹೆಚ್ಚುವರಿ ಹಣವನ್ನು ಹಿಂತಿರುಗಿಸಲಾಗುವುದು. ಅದೇ ರೀತಿ, ಅಗತ್ಯಬಿದ್ದರೆ, ಕಡಿಮೆ ಮೊತ್ತ ಪಾವತಿಸಿರುವ ವಿದ್ಯಾರ್ಥಿಗಳಿಗೆ ಬಾಕಿ ಮೊತ್ತ ಭರಿಸುವಂತೆ ಸೂಚಿಸಲಾಗುವುದು ಎಂದು ತಿಳಿಸಲಾಗಿದೆ.

ಮೌಲ್ಯಮಾಪನ ಮಾಡಲಾದ ಉತ್ತರ ಪತ್ರಿಕೆಗಳ ಸ್ಕ್ಯಾನ್ ಕಾಪಿಗಳಿಗಾಗಿ ವಿದ್ಯಾರ್ಥಿಗಳು ಮತ್ತೊಮ್ಮೆ ಮನವಿ ಸಲ್ಲಿಸುವ ಅಗತ್ಯವಿಲ್ಲ ಎಂಬುದಾಗಿಯೂ ಸ್ಪಷ್ಟಪಡಿಸಿದೆ.

ಹೊಸ ಸುನ್ನಿ ಈದ್ಗಾ-ಖಬ್ರಸ್ತಾನ್ ಸಮಿತಿಗೆ ಆಯ್ಕೆ

• ಪ್ರಜೋದಯ ವರದಿ

ಹಾಸನ: ನಗರದ ಮೆಹಬೂಬ್ ನಗರದಲ್ಲಿರುವ ಹೊಸ ಸುನ್ನಿ ಈದ್ಗಾ ಮತ್ತು ಖಬ್ರಸ್ತಾನ್ ಸಮಿತಿ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ 19 ಸದಸ್ಯರು ಅಧಿಕ ಮತ ಪಡೆದು ಗೆಲುವಿನ ನಗೆ ಬೀರಿದ್ದಾರೆ.

ಇದೇ ಮೊದಲ ಬಾರಿಗೆ ಚುನಾವಣೆ ನಡೆಯಿತು. ಒಟ್ಟು 41 ಅಭ್ಯರ್ಥಿಗಳ ಪೈಕಿ ಹೆಚ್ಚು ಮತ ಪಡೆದ 19 ಮಂದಿ ಸಮಿತಿಗೆ ಆಯ್ಕೆಯಾಗಿದ್ದಾರೆ. 1,136 ಮತದಾರರ ಪೈಕಿ 1,094 ಮತ ಚಲಾವಣೆಯಾಗಿವೆ. ಚುನಾವಣೆಯು ಆರಂಭದಿಂದಲೇ ಭಾರೀ ಪೈಪೋಟಿಗೆ ಕಾರಣವಾಗಿತ್ತು. ಅಭ್ಯರ್ಥಿಗಳು ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿದ್ದು, ಯುವಕರ ತಂಡಗಳು ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಂಡಿದ್ದರು. ಮತದಾನ ದಿನವೂ ಮತಗಟ್ಟೆ ಬಳಿ ಬೆಳಿಗ್ಗೆಯಿಂದ ಸಂಜೆವರೆಗೆ ಜನದಟ್ಟಣೆ ಕಂಡುಬಂತು. ರಾಜ್ಯ ವಕ್ಫ್ ಮಂಡಳಿಯ ಆದೇಶದಂತೆ ಹಾಸನ ಜಿಲ್ಲಾ ವಕ್ಫ್ ಅಧಿಕಾರಿ ಸಯ್ಯದ್ ಸತ್ತಾರ್ ಶಾ ಹುಸ್ಸೈನಿ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಆಯ್ಕೆಯಾದ 19 ವಿಜೇತರ ವಿವರ

ಅಬ್ದುಲ್ ರೆಹಮಾನ್-643 ಮತ ಪಡೆದು ಹೆಚ್ಚು ಅಂತರದಿಂದ ಗೆಲುವು ಸಾಧಿಸಿದರು. ಫೈರೋಜ್ ಪಾಷಾ-600, ಶಫಿಯುಲ್ಲಾ ಖಾನ್-580, ಶಬಾಜ್ ಖಾನ್-577, ಅಮಾನುಲ್ಲಾ -569 ಮತ, ಖಾಜಿಂ ಅಹ್ಮದ್-560, ಮೊಹಮ್ಮದ್ ಯೂಸುಫ್ ಖಾನ್-557, ಜಾವೀದ್ ಖಾನ್-542, ಸಯ್ಯದ್ ಇರ್ಫಾನ್-534, ಅಕ್ರಮ್ ಖಾನ್-510, ಸಯ್ಯದ್ ಜಮೀರ್ -508, ಶದಾಬ್ ಪಾಶಾ-502, ಸಯ್ಯದ್ ನಿಜಾಮ್-491, ಇಮ್ರಾನ್ ಖಾನ್-489, ಖಲೀಲ್ ಅಹ್ಮದ್-478, ಸಯ್ಯದ್ ಖದೀರ್-471, ಹೆಚ್.ಇ.ಅಕ್ರಂ ಪಾಷಾ-455, ಹೆಚ್.ಎಸ್.ಫಯಾಜ್ ಅಹಮದ್-438, ಇಮ್ತಿಯಾಸ್ ಪಾಷಾ -431 ಮತ ಪಡೆದು ಸಮಿತಿಗೆ ಆಯ್ಕೆಯಾಗಿದ್ದಾರೆ.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ವಿಜೇತ ಅಭ್ಯರ್ಥಿಗಳ ಬೆಂಬಲಿಗರು ಸಂಭ್ರಮಾಚರಣೆ ನಡೆಸಿದರು. ಕೆಲವೆಡೆ ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು. ಪೆನ್ಷನ್ ಮೊಹಲ್ಲಾ ಸೇರಿ ನಗರದ ಪ್ರಮುಖ ಭಾಗಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಎಬೋಲಾ ಸೋಂಕು: 3 ದೇಶಗಳ ಪ್ರವಾಸ ನಿಷೇಧ

• ಪ್ರಜೋದಯ ವರದಿ

ನವದೆಹಲಿ: ಆಫ್ರಿಕಾ ಖಂಡದಲ್ಲಿ ಮಾರಣಾಂತಿಕ ಎಬೋಲಾ ವೈರಸ್ ತೀವ್ರವಾಗಿ ಹರಡುತ್ತಿರುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಆರೋಗ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಿದೆ. ಇದರ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಭಾರತ ಸರ್ಕಾರವು, ನಾಗರಿಕರಿಗೆ ಆಫ್ರಿಕಾದ ಮೂರು ಪ್ರಮುಖ ದೇಶಗಳಿಗೆ ಪ್ರಯಾಣವನ್ನು ಕೈಗೊಳ್ಳದಂತೆ ಕಟ್ಟುನಿಟ್ಟಿನ ಸಲಹೆ ನೀಡಿದೆ.

ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ದಿ ಕಾಂಗೋ, ಉಗಾಂಡಾ, ದಕ್ಷಿಣ ಸೂಡಾನ್ ದೇಶಗಳಿಗೆ ಪ್ರಯಾಣ ಬೆಳಸದಂತೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ತಿಳಿಸಿದೆ.

ಭಾರತದಲ್ಲಿ ಸದ್ಯಕ್ಕಿಲ್ಲ ಆತಂಕ: ಈ ಬುಂದಿಬುಗ್ಯೋ ತಳಿಯ ಎಬೋಲಾ ವೈರಸ್‌ನ ಯಾವುದೇ ಪ್ರಕರಣ ಇದುವರೆಗೆ ಭಾರತದಲ್ಲಿ ವರದಿಯಾಗಿಲ್ಲ, ಭಾರತೀಯ ನಾಗರಿಕರ

ಸುರಕ್ಷತೆಗಾಗಿ ಸರ್ಕಾರವು ತಕ್ಷಣದಿಂದಲೇ ಜಾರಿಗೆ ಬರುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಬಿಗಿಗೊಳಿಸಲಾಗಿದೆ. ಆಫ್ರಿಕಾದ ಬಾಧಿತ ಪ್ರದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ತೀವ್ರ ನಿಗಾ ಇಡಲಾಗಿದೆ. ವಿಮಾನ ನಿಲ್ದಾಣಗಳು ಮತ್ತು ಪ್ರವೇಶ ದ್ವಾರಗಳಲ್ಲಿ ಜ್ವರ ಅಥವಾ ಇತರ ಅನಾರೋಗ್ಯದ ಲಕ್ಷಣಗಳಿರುವವರನ್ನು ಪತ್ತೆಹಚ್ಚಲು ಥರ್ಮಲ್ ಸ್ಕ್ರೀನಿಂಗ್ ಮತ್ತು ಕಠಿಣ ತಪಾಸಣೆಯನ್ನು ಆರಂಭಿಸಲಾಗಿದೆ.

ನಾಗರಿಕರಿಗೆ ಸೂಚನೆ: ಈಗಾಗಲೇ ಆಫ್ರಿಕಾದ ಆ ಭಾಗಗಳಲ್ಲಿ ವಾಸಿಸುತ್ತಿರುವ ಅಥವಾ ಪ್ರವಾಸದಲ್ಲಿರುವ ಭಾರತೀಯರು ಅಲ್ಲಿನ ಸ್ಥಳೀಯ ಆರೋಗ್ಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಅತ್ಯಂತ ಜಾಗರೂಕರಾಗಿರಬೇಕೆಂದು ತಿಳಿಸಲಾಗಿದೆ.

ತುರ್ತು ಪರಿಸ್ಥಿತಿ ಘೋಷಿಸಿದ ವಿಶ್ವ ಆರೋಗ್ಯ ಸಂಸ್ಥೆ: ಎಬೋಲಾ ಸೋಂಕು ಹರಡುವಿಕೆಯನ್ನು ಜಾಗತಿಕ ಮಟ್ಟದಲ್ಲಿ ಗಮನ ಹರಿಸಬೇಕಾದ ಸಾರ್ವಜನಿಕ ಆರೋಗ್ಯ ತುರ್ತುಪರಿಸ್ಥಿತಿ (ಪಿಎಚ್‌ಇಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಘೋಷಿಸಿದೆ. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ಹಾಗೂ ಉಗಾಂಡದಲ್ಲಿ ವರದಿಯಾಗಿರುವ ಎಬೋಲಾ ಕಾಯಿಲೆ ಗಮನದಲ್ಲಿಟ್ಟುಕೊಂಡು ವಿಶ್ವ ಆರೋಗ್ಯ ಸಂಸ್ಥೆಯು ಅಂತರರಾಷ್ಟ್ರೀಯ ಆರೋಗ್ಯ ನಿಯಮ (ಐಎಚ್‌ಪಿ) 2005ರ ಅಡಿಯಲ್ಲಿ ಜಾಗತಿಕ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಘೋಷಿಸಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹೊರಡಿಸಿರುವ ಪ್ರಕಟಣೆಯಲ್ಲಿ ಈ ಕುರಿತು ಅಧಿಕೃತವಾಗಿ ಘೋಷಿಸಲಾಗಿದೆ ಎಂದು ತಿಳಿಸಿದೆ.

ವಿಶ್ವ ಆರೋಗ್ಯ ಸಂಸ್ಥೆಯ ತುರ್ತು ಸಮಿತಿಯು ಎಬೋಲಾ ರೋಗದ ನಿಯಂತ್ರಣಕ್ಕೆ ಶಿಫಾರಸುಗಳನ್ನು ಮಾಡಿದೆ. ವೈರಸ್ ಪತ್ತೆಯಾಗಿರುವ ಪ್ರದೇಶಗಳಿಂದ ಬರುವ ಪ್ರಯಾಣಿಕರಲ್ಲಿ ಜ್ವರದ ಲಕ್ಷಣಗಳಿದ್ದರೆ ಅದನ್ನು ಪತ್ತೆ ಹಚ್ಚಲು ಹಾಗೂ ಬೇಕಾದ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಅಲ್ಲದೆ ಅಂತಹ ಪ್ರದೇಶಗಳಿಗೆ ತೆರಳದಂತೆ ಸೂಚಿಸಲಾಗಿದೆ.

ಕಾಂಗೋದಲ್ಲಿ ಎಬೋಲಾ ಸೋಂಕಿನಿಂದ ಮೃತರ ಸಂಖ್ಯೆ 200ರ ಗಡಿ ದಾಟಿ ದಾಟಿದೆ. ಒಟ್ಟಾರೆ 867 ಸೋಂಕಿತ ಪ್ರಕರಣಗಳು ದಾಖಲಾಗಿವೆ.

ಕಪ್ಪೆ ಚಿಪ್ಪು ಆರಿಸಲು ಹೋಗಿದ್ದ 8 ಜನರ ಸಾವು

• ಪ್ರಜೋದಯ ವರದಿ

ಭಟ್ಕಳ: ಚಪ್ಪೆಕಲ್ಲು ತೆಗೆಯಲು ಹೋದ ಒಂದೇ ಕುಟುಂಬದ 8 ಮಂದಿ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ತಾಲ್ಲೂಕಿನ ಶಿರಾಲಿಯ ಅಳ್ವೆಕೋಡಿ ಸಮೀಪ ತಟ್ಟಿಹಕ್ಕಲ ಕಳಿನಟ್ಟಿ ಹೊಳೆಯಲ್ಲಿ ಭಾನುವಾರ ನಡೆದಿದೆ.

ಪಡುಶಿರಾಲಿ ಬೆಂಗ್ರೆಯ ಲಕ್ಷ್ಮಿ ಮಹಾದೇವ ನಾಯ್ಕ (42), ಶಾರದಾ ಹೊಳೆಯವರಾದ ಉಮೇಶ ನಾಯ್ಕ (30), ಲಕ್ಷ್ಮಿ ನಾಯ್ಕ (30), ಲಕ್ಷ್ಮಿ ಅಣ್ಣಪ್ಪ ನಾಯ್ಕ (60), ಲಕ್ಷ್ಮಿ ಶಿವರಾಮ ನಾಯ್ಕ (49), ಜ್ಯೋತಿ ನಾಗಪ್ಪ ನಾಯ್ಕ (34), ಮಾಲತಿ ನಾಯ್ಕ (38), ಮಾಸ್ತಮ್ಮ ನಾಯ್ಕ ಮೃತರು. ಅಳ್ವೆಕೋಡಿಯಲ್ಲಿ ಎಲ್ಲರ ಮೃತದೇಹ ಪತ್ತೆಯಾಗಿದೆ. ಕಪ್ಪೆ ಚಿಪ್ಪು ಆರಿಸಲು ನದಿಗೆ ಇಳಿದಿದ್ದವರು ಪರಸ್ಪರ ಕೈ ಹಿಡಿದು ಸಾಗುತ್ತಿದ್ದರು. ತಡರಾತ್ರಿ ಸುರಿದ ಮಳೆಗೆ ನದಿಯಲ್ಲಿ ನೀರಿನ ಹರಿವು ಹೆಚ್ಚಿತ್ತು. ಜೊತೆಗೆ ಸಮುದ್ರದ ಅಲೆಗಳ ಅಬ್ಬರದಿಂದ ನೀರಿನ ಮಟ್ಟ ಏರಿಕೆಯಾಗಿ, ಮುಳುಗಿರುವ ಶಂಕೆ ಇದೆ. ಘಟನೆಯಲ್ಲಿ ನಾಗರತ್ನಾ ಮತ್ತು ಮಹಾದೇವಿ ಎಂಬುವವರು ಅಪಾಯದಿಂದ

ಪಾರಾಗಿದ್ದಾರೆ. ಅವರನ್ನು ಚಿಕಿತ್ಸೆಗೆ ಮಣಿಪಾಲಕ್ಕೆ ಕರೆದೊಯ್ಯಲಾಗಿದೆ. ಇನ್ನೂ ಕೆಲವರು ಕಣ್ಮರೆಯಾಗಿರುವ ಶಂಕೆ ಇದ್ದು, ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಭಟ್ಕಳ ಠಾಣೆ ಪೊಲೀಸರು ತಿಳಿಸಿದ್ದಾರೆ.

5 ಲಕ್ಷ ರೂ. ಪರಿಹಾರ ಘೋಷಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಸಮೀಪದ ತಟ್ಟೆಹಕ್ಕಲು ಕಡಲ ತೀರದಲ್ಲಿ ಕಪ್ಪೆಚಿಪ್ಪು ತರಲು ಹೋದವರ ಪೈಕಿ ಒಂದೇ ಕುಟುಂಬದ ಎಂಟು ಮಂದಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ ಸುದ್ದಿ ತಿಳಿದು ಸಂಕಟವಾಯಿತು. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಇದೊಂದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ಘಟನೆ. ದುರಂತದಲ್ಲಿ ಮಡಿದವರ ಕುಟುಂಬಕ್ಕೆ ಮಾನವೀಯ ನೆಲೆಯಲ್ಲಿ ರಾಜ್ಯ ಸರ್ಕಾರದಿಂದ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು. ಇನ್ನೂ ಕೆಲವರು ಈ ದುರ್ಘಟನೆಯಲ್ಲಿ ಕಾಣೆಯಾಗಿರುವ ಮಾಹಿತಿ ಇದ್ದು, ಅವರಿಗಾಗಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆ. ಕಾಣೆಯಾದವರು ಬದುಕಿಬಂದು ತಮ್ಮವರನ್ನು ಕೂಡಿಕೊಳ್ಳಲಿ ಎಂದು ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸೋಣ ಎಂದಿದ್ದಾರೆ.

ಗೊಬ್ಬರ ಅಕ್ರಮ ದಾಸ್ತಾನು: ಕೃಷಿ ಅಧಿಕಾರಿಗಳಿಂದ ದಾಳಿ

ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯ ಕೊಡಗಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 600 ಚೀಲ ಯೂರಿಯಾ ರಸಗೊಬ್ಬರವನ್ನು ಕೃಷಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕೃಷಿ ಬಳಕೆಗೆಂದು ಮೀಸಲಿಟ್ಟಿದ್ದ ಈ ಯೂರಿಯಾವನ್ನು ಇದಾಯತ್ ಉಲ್ಲಾ ಎಂಬುವವರು ತಮ್ಮ ತೋಟದಲ್ಲಿ ಅಕ್ರಮವಾಗಿ ಶೇಖರಿಸಿದ್ದರು. ಕಾಳಸಂತೆಯಲ್ಲಿ ಕೈಗಾರಿಕೆ ಬಳಕೆಗೆ ಮಾರ ಲೆಂದು ಇದನ್ನು ಸಂಗ್ರಹಿಸಿ ಇಡಲಾಗಿತ್ತು. ಖಚಿತ ಮಾಹಿತಿ ಮೇರೆಗೆ ತಿ.ನರಸೀಪುರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ರೂಪಾ ನೇತೃತ್ವದ ತಂಡವು ದಾಳಿ ನಡೆಸಿ ಯೂರಿಯಾ ವಶಕ್ಕೆ ಪಡೆಯಿತು. ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋವು ರಾಷ್ಟ್ರೀಯ ಪ್ರಾಣಿಯಾಗಲಿ: ಮುಸ್ಲಿಂ ಸಂಘಟನೆಗಳು

• ಪ್ರಜೋದಯ ವರದಿ

ಲಖನೌ: ಈದ್ ಉಲ್ ಅದಾ (ಬಕ್ರೀದ್) ಸಂಭ್ರಮಕ್ಕೆ ಕೆಲವೇ ದಿನಗಳು ಬಾಕಿ ಇರುವ ಹೊತ್ತಿನಲ್ಲಿ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಹಲವು ಮುಸ್ಲಿಂ ಸಂಘಟನೆಗಳು ಬೇಡಿಕೆ ಇಟ್ಟಿವೆ.

ಜಮೈತ್ ಉಲ್ಮಾ ಎ ಹಿಂದ್ (ಅರ್ಷದ್ ಮದನಿ ಬಣ) ಸಂಘಟನೆ ಅಧ್ಯಕ್ಷ ಮೌಲಾನಾ ಅರ್ಷದ್ ಮದನಿ ನೇತೃತ್ವದಲ್ಲಿ ಹಲವು ಸಂಘಟನೆಗಳು ಒಗ್ಗೂಡಿವೆ. ಮುಸ್ಲಿಮರ ಮೇಲೆ ಆಗುತ್ತಿರುವ ರಾಜಕೀಯ ಶೋಷಣೆ, ಗುಂಪು ದಾಳಿ, ಹತ್ಯೆ ಮತ್ತು ಇತರ ದೌರ್ಜನ್ಯಗಳನ್ನು ಕೊನೆಗೊಳಿಸಲು ಈ ನಿರ್ಧಾರದಿಂದ ಸಾಧ್ಯವಾಗಲಿದೆ ಎಂಬುದು ಸಂಘಟನೆಗಳ ಆಶಯ. ಈ ನಿರ್ಧಾರದ ಬಗ್ಗೆ ಸಮುದಾಯದವರಲ್ಲಿ ಸಹಮತ ಮೂಡಿಸುವ ಕೆಲಸದಲ್ಲಿ ಸಂಘಟನೆಗಳ

ಹಲವರು ನಿರತರಾಗಿದ್ದಾರೆ. ಮತ್ತಷ್ಟು ಮಂದಿ ಪ್ರಧಾನಿ ನರೇಂದ್ರ ಮೋದಿ ಹಾಗು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ದೇಶದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರ ಪ್ರದೇಶದಲ್ಲಿ ಮುಸ್ಲಿಮರ ಸಂಖ್ಯೆಯೂ ಗಣನೀಯವಾಗಿದೆ. ಹಿಂದೂಪರ ಸಂಘಟನೆಗಳು ಈ ಹಿಂದೆ ಇಂತಹ ಬೇಡಿಕೆ ಇಟ್ಟಿದ್ದವು. ಇದೀಗ, ಮುಸ್ಲಿಮರೂ ಈ ವಿಚಾರ ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿ 2027ಕ್ಕೆ ವಿಧಾನಸಭಾ ಚುನಾವಣೆ ನಡೆಯಲಿರುವುದರಿಂದ ರಾಷ್ಟ್ರೀಯ ಪ್ರಾಣಿ ಬೇಡಿಕೆ ಮಹತ್ವ ಪಡೆದುಕೊಂಡಿದೆ.

ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿಸಬೇಕೆಂಬ ಮದನಿ ಅವರ ಬೇಡಿಕೆಗೆ ಸಂಪೂರ್ಣ ಬೆಂಬಲವಿದೆ ಎಂದು ಆಲ್ ಇಂಡಿಯಾ ಮುಸ್ಲಿಂ ಜಮಾತ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಮೌಲಾನ ಶಹಾಬುದ್ದೀನ್ ರಿಝ್ವಿ ಹೇಳಿದ್ದಾರೆ. ಈ ಬೇಡಿಕೆಯನ್ನು ಈಡೇರಿಸುವುದರಿಂದ, ದೇಶದಾದ್ಯಂತ ಗೋಹತ್ಯೆಗೆ ಸಂಬಂಧಿಸಿದಂತೆ ನೀತಿಗಳಲ್ಲಿ ಏಕರೂಪತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆಂದು ಅವರು ಪ್ರತಿಪಾದಿಸಿದ್ದಾರೆ.

ಆಲ್ ಇಂಡಿಯಾ ಕುರೇಷಿ ಜಮಾತ್, ಆಲ್ ಇಂಡಿಯಾ ಶಿಯಾ ವೈಯಕ್ತಿಕ ಕಾನೂನು ಮಂಡಳಿ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಸೇರಿ ಹಲವು ಸಂಘಟನೆಗಳು ಜಮೈತ್ ಉಲ್ಮಾ ಎ ಹಿಂದ್ ಬೇಡಿಕೆಗೆ ಬಂಬಲ ಸೂಚಿಸಿವೆ. ನಮ್ಮ ಹಿಂದೂ ಸಹೋದರರು ಗೋವಿನ ಬಗ್ಗೆ ಧಾರ್ಮಿಕ ಭಾವನೆಗಳನ್ನು ಹೊಂದಿದ್ದಾರೆ. ಅವರ ಭಾವನೆಗಳಿಗೆ ಗೌರವ ನೀಡಿ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕು. ಗೋಹತ್ಯೆಗೆ ಸಂಬಂಧಿಸಿದಂತೆ ದೇಶದಾದ್ಯಂತ ಏಕರೂಪದ ಕಾನೂನು ಜಾರಿಯಾಗಬೇಕೆಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಹಿರಿಯ ಕಾರ್ಯಕಾರಿ ಸದಸ್ಯ ಮೌಲಾನಾ ಖಾಲಿದ್ ರಶೀದ್ ಫರಂಗಿ ಮಹಾಲಿ ಆಗ್ರಹಿಸಿದ್ದಾರೆ.

ಸಿಜೆಪಿ ಮೇಲಿನ ನಿರ್ಬಂಧ ಯುವಜನರ ಧ್ವನಿ ಅಡಗಿಸಲು ಯತ್ನ

• ಪ್ರಜೋದಯ ವರದಿ

ಕಣ್ಣೂರು: ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ವಿರುದ್ಧ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೇಶದ ಯುವಜನತೆಯಲ್ಲಿ ಹೆಚ್ಚುತ್ತಿರುವ ಆಕ್ರೋಶದ ಪ್ರತಿಬಿಂಬವಾಗಿರುವ ಇಂತಹ ವೇದಿಕೆಗಳನ್ನು ಬಲವಂತವಾಗಿ ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಅವರು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಸಿಜೆಪಿ ಚಳವಳಿಯು ಯುವ ಪೀಳಿಗೆಯ ಭಾವನೆಗಳ ಅಭಿವ್ಯಕ್ತಿಯಾಗಿದೆ. ಅವರ ಕಳಕಳಿ ಮತ್ತು ಸಮಸ್ಯೆಗಳನ್ನು ಸರ್ಕಾರ ಹೀಗೆಯೇ ನಿರ್ಲಕ್ಷಿಸುತ್ತಾ ಹೋದರೆ, ಈ ಡಿಜಿಟಲ್ ಪ್ರತಿ ಭಟನೆ ಮುಂದಿನ ದಿನಗಳಲ್ಲಿ ದೊಡ್ಡ ರಾಜಕೀಯ ಚಳವಳಿಯಾಗಿ ರೂಪಾಂತರಗೊಳ್ಳಬಹುದು ಎಂದು ವೇಣುಗೋಪಾಲ್ ಹೇಳಿದ್ದಾರೆ.

ದೇಶದ ಇಂದಿನ ಅತಿ ದೊಡ್ಡ ಸಮಸ್ಯೆ ಎಂದರೆ ಜನರ ಕಷ್ಟಗಳಿಗೆ ಸ್ಪಂದಿಸುವ ಸರ್ಕಾರ ಅಧಿಕಾರದಲ್ಲಿಲ್ಲದಿರುವುದು. ಯುವಜನರು ತಮ್ಮ ಭಾವನೆಗಳನ್ನು ಗೌರವಿಸುವ ಆಡಳಿತವನ್ನು ಬಯಸುತ್ತಾರೆ. ಅದನ್ನು ಬಿಟ್ಟು ಇಂತಹ ಚಳವಳಿಗಳನ್ನು ಹತ್ತಿಕ್ಕಲು ನೋಡಿದರೆ, ಪ್ರತಿಭಟನೆ ಮತ್ತಷ್ಟು ತೀವ್ರಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ದಿನಬಳಕೆ ವಸ್ತುಗಳ ಬೆಲೆ ಏರಿಕೆ ಗಗನಕ್ಕೇರುತ್ತಿದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಪ್ರತಿದಿನ ಹೆಚ್ಚುತ್ತಿದ್ದು, ಮುಂಬರುವ ದಿನಗಳು ದೇಶದ ಜನರಿಗೆ ಮತ್ತಷ್ಟು ಕಷ್ಟಕರವಾಗಲಿವೆ. ಈ ನಿರಾಸೆಯೇ ಯುವಕರನ್ನು ಪ್ರತಿಭಟನೆಯತ್ತ ತಳ್ಳುತ್ತಿದೆ ಎಂದಿದ್ದಾರೆ.

ಕದನ ವಿರಾಮದ ನಡುವೆ ಯುಕ್ರೇನ್ ಮೇಲೆ ರಷ್ಯಾ ಭೀಕರ ದಾಳಿ

• ಪ್ರಜೋದಯ ವರದಿ

ಮಾಸ್ಕೋ: ಯುಕ್ರೇನ್‌ನ ರಾಜಧಾನಿ ಕೀವ್ ಮೇಲೆ ರಷ್ಯಾ ತೀವ್ರ ದಾಳಿ ನಡೆಸಿದೆ. ಇತ್ತೀಚಿನ ವಾರಗಳಲ್ಲಿ ನಡೆದ ಅತ್ಯಂತ ವಿನಾಶಕಾರಿ ದಾಳಿ ಇದಾಗಿದ್ದು, ರಷ್ಯಾ ಆಕ್ರಮಿತ ಪೂರ್ವ ಉಕ್ರೇನ್‌ನಲ್ಲಿ ನಡೆದ ದಾಳಿಗಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ವ್ಲಾಡಿಮಿರ್ ಪುಟಿನ್ ಬೆದರಿಕೆ ಹಾಕಿದ ನಂತರ ಕೀವ್ ಭಾರೀ ಬಾಂಬ್ ದಾಳಿಗೆ ಒಳಗಾಗಿದೆ.

ಆನ್‌ಲೈನ್‌ನಲ್ಲಿ ಪ್ರಸಾರವಾಗುವ ವಿಡಿಯೋ, ಕೀವ್ ಕೇಂದ್ರ ಪ್ರದೇಶಕ್ಕೆ ಕ್ರೂಸ್ ಕ್ಷಿಪಣಿಯನ್ನು ಅಪ್ಪಳಿಸುತ್ತಿರುವುದನ್ನು ತೋರಿಸುತ್ತದೆ. ದೃಶ್ಯಗಳಲ್ಲಿ, ಘರ್ಷಣೆಯ ಕ್ಷಣದಲ್ಲಿ ತೀವ್ರವಾದ ಬೆಳಕಿನ ಹಠಾತ್ ಮಿಂಚನ್ನು ಕಾಣಬಹುದು, ನಂತರ ಪ್ರಬಲ ಸ್ಫೋಟ ಸಂಭವಿಸಿದೆ. ದಾಳಿಯಲ್ಲಿ ಸುಮಾರು 600 ಡ್ರೋನ್‌ಗಳು ಮತ್ತು 90 ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಯುಕ್ರೇನಿಯನ್ ಅಧಿಕಾರಿಗಳು ತಿಳಿಸಿದ್ದಾರೆ. ವಾಯು ರಕ್ಷಣಾ ವ್ಯವಸ್ಥೆಗಳು ಅವುಗಳಲ್ಲಿ ಹಲವನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾದವು. ಆದರೆ, ಎಲ್ಲವನ್ನೂ ಅಲ್ಲ ವೆಂದು ಎಎಫ್‌ಪಿ ವರದಿ ಮಾಡಿದೆ.

ಲುಕಿಯಾನಿವ್ಸ್ಕಾ ಮೆಟ್ರೋ ನಿಲ್ದಾಣದ ಬಳಿ ಇರುವ ಒಂದು ವ್ಯಾಪಾರ ಕೇಂದ್ರ ಮತ್ತು ಹತ್ತಿರದ ಮಾರುಕಟ್ಟೆಯು ದಾಳಿಯಲ್ಲಿ ಸಂಪೂರ್ಣವಾಗಿ ನಾಶವಾಯಿತು ಎಂದು ಯುರೋಮೈಡನ್ ಪ್ರೆಸ್ ವರದಿ ಮಾಡಿದೆ. ಹಾನಿಗೊಳಗಾದ ಸ್ಥಳಗಳಲ್ಲಿ ಒಂದು ಸಣ್ಣ ಕೆಫೆಯೂ ಸೇರಿತ್ತು, ಇದನ್ನು ಹಿಂದಿನ ರಷ್ಯಾದ ದಾಳಿಯ ನಂತರ ಈಗಾಗಲೇ ಆರು ಬಾರಿ ಪುನರ್ನಿರ್ಮಿಸಿ ಮತ್ತೆ ತೆರೆಯಲಾಗಿತ್ತು.

ದಾಳಿಯಲ್ಲಿ ನಾಲ್ಕು ಜನರು ಸಾವನ್ನಪ್ಪಿದ್ದು, ಹಲವು ಜನರು ಗಾಯಗೊಂಡಿದ್ದಾರೆ. ರಾಜಧಾನಿ ಮತ್ತು ಇತರ ಪ್ರದೇಶಗಳಲ್ಲಿ ಮನೆಗಳು, ಶಾಲೆಗಳು, ಮಾರುಕಟ್ಟೆ

ಗಳು ಮತ್ತು ವ್ಯಾಪಾರ ಕಟ್ಟಡಗಳು ಹಾನಿಗೊಳಗಾಗಿವೆ. ಕೀವ್‌ನಲ್ಲಿ ರಾತ್ರಿಯಿಡೀ ಸ್ಫೋಟದ ಶಬ್ದಗಳು ಕೇಳಿ ಬಂದವು. ಕ್ಷಿಪಣಿಗಳು ಮತ್ತು ಡ್ರೋನ್‌ಗಳು ನಗರವನ್ನು ಅಪ್ಪಳಿಸುತ್ತಿದ್ದಂತೆ ನಿವಾಸಿಗಳು ಸುರಕ್ಷತೆಗಾಗಿ ಮೆಟ್ರೋ ನಿಲ್ದಾಣಗಳು ಮತ್ತು ಭೂಗತ ಆಶ್ರಯಗಳಿಗೆ ಧಾವಿಸಿದರು.

ಆಂಡ್ರಿ ಸಿಬಿಹಾ ಅವರು ರಷ್ಯಾವನ್ನು ತೀವ್ರವಾಗಿ ಟೀಕಿಸಿದರು, ಈ ದಾಳಿಯು ಮಿಲಿಟರಿ ಗುರಿಗಳ ಬಗ್ಗೆ ಅಲ್ಲ, ನಾಗರಿಕರಿಗೆ ಹಾನಿ ಮಾಡುವ ಬಗ್ಗೆ ಎಂದು ಹೇಳಿದರು. ರಷ್ಯಾ ಕೈವ್ ಮತ್ತು ಚೆರ್ಕಾಸಿ, ಖಾರ್ಕಿವ್, ಕ್ರೊಪಿವ್ನಿಟ್ಸ್ಕಿ, ಒಡೆಸಾ, ಪೋಲ್ಟವಾ, ಸುಮಿ ಮತ್ತು ಜೈಟೊಮಿರ್ ಸೇರಿ ಹಲವಾರು ಇತರ ಉಕ್ರೇನಿಯನ್ ಪ್ರದೇಶಗಳ ಮೇಲೆ ರಾತ್ರಿ ಇಡೀ ನಡೆದ ಅತಿದೊಡ್ಡ ದಾಳಿಗಳಲ್ಲಿ ಒಂದನ್ನು ನಡೆಸಿದೆ ಎಂದು ಅವರು ಬರೆದಿದ್ದಾರೆ.

ಯುಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ರಷ್ಯಾ ಒರೆಶ್ನಿಕ್ ಹೈಪರ್ಸಾನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿ ಎಂಬ ಪ್ರಬಲ ಆಯುಧವನ್ನು ಸಹ ಬಳಸಿದೆ. ಒರೆಶ್ನಿಕ್ ಶಬ್ದದ ಹತ್ತು ಪಟ್ಟು ವೇಗದಲ್ಲಿ ಚಲಿಸುವ ಸಾಮರ್ಥ್ಯವಿರುವ ಹೈಪರ್ಸಾನಿಕ್ ಕ್ಷಿಪಣಿಯಾಗಿದ್ದು, ಮೂರು, ನಾಲ್ಕು ಅಥವಾ ಹೆಚ್ಚಿನ ಮಹಡಿಗಳ ಕೆಳಗೆ ಇರುವ ಭೂಗತ ಬಂಕರ್‌ಗಳನ್ನು ನಾಶಮಾಡಲು ವಿನ್ಯಾಸಗೊಳಿಸಲಾಗಿದೆ. ರಷ್ಯಾ ಮೊದಲು 2024 ರ ನವೆಂಬರ್‌ನಲ್ಲಿ ಉಕ್ರೇನಿಯನ್ ನಗರವಾದ ಡ್ನಿಪ್ರೊದಲ್ಲಿ ಬಹು- ವಾರ್‌ಹೆಡ್ ಒರೆಶ್ನಿಕ್ ಅನ್ನು ಬಳಸಿತ್ತು. ಇದನ್ನು ಜನವರಿಯಲ್ಲಿ ಪಶ್ಚಿಮ ಎಲ್ವಿವ್ ಪ್ರದೇಶದಲ್ಲಿ ಎರಡನೇ ಬಾರಿಗೆ ಬಳಸಲಾಗಿದೆ ಎಂದು ವರದಿಯಾಗಿದೆ ಎಂದು ನ್ಯೂಸ್ ವರದಿ ಮಾಡಿದೆ.

ಈ ದಾಳಿಯನ್ನು ಝೆಲೆನ್ಸ್ಕಿ ತೀವ್ರವಾಗಿ ಖಂಡಿಸಿದರು. ಇದು ಸಾಮಾನ್ಯ ನಾಗರಿಕರು ಮತ್ತು ಮಾರುಕಟ್ಟೆಗಳು, ಶಾಲೆಗಳು ಮತ್ತು ನೀರಿನ ಸೌಲಭ್ಯಗಳು ಸೇರಿ ನಾಗರಿಕ ಮೂಲಸೌಕರ್ಯವನ್ನು ಗುರಿ ಯಾಗಿಸಿ ಕೊಂಡಿದೆ ಎಂದು ಹೇಳಿದರು.

ರಷ್ಯಾದ ರಕ್ಷಣಾ ಸಚಿವಾಲಯ ಭಾನುವಾರ ಉಕ್ರೇನಿಯನ್ ಮಿಲಿಟರಿ ಕಮಾಂಡ್ ಮತ್ತು ನಿಯಂತ್ರಣ ಸೌಲಭ್ಯಗಳು, ವಾಯುನೆಲೆಗಳು ಮತ್ತು ಮಿಲಿಟರಿ-ಕೈಗಾರಿಕಾ ಉದ್ಯಮಗಳ ಮೇಲೆ ದಾಳಿ ಮಾಡಲು ಒರೆಶ್ನಿಕ್ ಜೊತೆಗೆ ಇತರ ಕ್ಷಿಪಣಿ ವ್ಯವಸ್ಥೆಗಳನ್ನು ಬಳಸಿದೆ ಎಂದು ದೃಢಪಡಿಸಿತು, ಆದರೆ ಗುರಿಗಳ ಸ್ಥಳಗಳನ್ನು ನಿರ್ದಿಷ್ಟ ಪಡಿಸಲಿಲ್ಲ. ರಷ್ಯಾ ನಿಯಂತ್ರಿತ ಪ್ರದೇಶಗಳ ಮೇಲೆ ಉಕ್ರೇನಿಯನ್ ದಾಳಿಗೆ ಈ ದಾಳಿ ಪ್ರತಿಕ್ರಿಯೆ ಎಂದು ರಷ್ಯಾ ಹೇಳಿದೆ.

ವಿಶ್ವಾಸ ದ್ರೋಹ ರಾಜ್ಯ ಸರ್ಕಾರದ ಸಾಧನೆ : ಟೀಕೆ

• ಪ್ರಜೋದಯ ವರದಿ

- ಕಾಂಗ್ರೆಸ್ ವಿರುದ್ಧ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಕಿಡಿ
- ಪಕ್ಷ ಸಂಘಟನೆಗೆ ಸಲಹೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರವು ಕಳೆದ 3 ವರ್ಷಗಳಲ್ಲಿ ಜನರನ್ನು ವಂಚಿಸುತ್ತಲೇ ಇದೆ. ವಿಶ್ವಾಸ ದ್ರೋಹವೇ ಕಾಂಗ್ರೆಸ್ ಸಾಧನೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರು ಟೀಕಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ನಾಯಕರು ಒಳಜಗಳದಿಂದ ಜನಹಿತದ ಕೆಲಸಗಳನ್ನು ಕಡೆಗಣಿಸಿದ್ದಾರೆ. ಜನಹಿತಕ್ಕೂ ಈ ಸರ್ಕಾರಕ್ಕೂ ಸಂಬಂಧ ಇಲ್ಲದಂತಾಗಿದೆ. ನಾಯಕರು ಸರ್ಕಾರವನ್ನು ತಮಗಾಗಿ ಬಳಸಿಕೊಳ್ಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಕಾಂಗ್ರೆಸ್ ಸಂಪೂರ್ಣ ವಿಫಲವಾಗಿದೆ. ಇಲ್ಲಿನ ಸರ್ಕಾರ ದೆಹಲಿ ಕಾಂಗ್ರೆಸ್ಸಿನ ಎಟಿಎಂ ಆಗಿದೆ ಎಂದು ದೂರಿದರು.

ನಮ್ಮ ಪಕ್ಷದ ಜಿಲ್ಲಾ ತರಬೇತಿ ಶಿಬಿರಗಳು ನಡೆಯುತ್ತಿವೆ. ಅದರಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ. ಕರ್ನಾಟಕದಲ್ಲಿ ಪಕ್ಷದ ಚಟುವಟಿಕೆ, ಸಕ್ರಿಯ ಸಂಘಟನೆ ಎಂಬುದನ್ನು ತಿಳಿದುಕೊಂಡಿದ್ದೇನೆಂದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್ ದಾಸ್ ಅಗ್ರವಾಲ್ ಮತ್ತಿತರರು ಇದ್ದರು.

ಪಕ್ಷ ಸಂಘಟನೆ ಸಲಹೆ ನೀಡಿದ್ದಾರೆ

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಮಾತನಾಡಿ, ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ನಿತಿನ್ ನಬಿನ್ ಅವರು ಸಲಹೆ ಮತ್ತು ಸೂಚನೆ ನೀಡಿದ್ದಾರೆಂದರು.

ನಿತಿನ್ ನಬಿನ್ ಅವರೊಂದಿಗೆ ನಡೆದ ಸಭೆಯ ನಂತರ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ಪರಿಶ್ರಮದಿಂದಾಗಿ 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. 400ಕ್ಕೂ ಹೆಚ್ಚು ಸಂಸದರಿದ್ದಾರೆ, 2000ಕ್ಕೂ ಹೆಚ್ಚು ಶಾಸಕರಿದ್ದಾರೆ. ಇದು ಪಕ್ಷದ ಮೇಲೆ ಜನರು ಇಟ್ಟು ವಿಶ್ವಾಸದಿಂದ ಸಾಧ್ಯವಾಗಿದೆ. ಇದೇ ನಂಬಿಕೆಯನ್ನು ಮುಂದಿನ ಚುನಾವಣೆಗಳಲ್ಲಿ ಉಳಿಸಿಕೊಳ್ಳಬೇಕು. ಪ್ರತಿಯೊಬ್ಬ ಮುಖಂಡರು, ಶಾಸಕರು ಕಾರ್ಯಕರ್ತರೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳಬೇಕು. ಜನರೊಟ್ಟಿಗೆ ಸಂವಾದ ನಡೆಸಬೇಕು, ಜನಪರ ಕಾರ್ಯಗಳ ಮೂಲಕವೇ ಗೆಲ್ಲಬೇಕು, ಜನಪರ ಹೋರಾಟಗಳ ಮೂಲಕ ಸಮಸ್ಯೆಗಳ ನಿವಾರಣೆಗೆ ಪರಿಹಾರ ಕೊಡಬೇಕು ಎಂಬ ಮಾತನ್ನು ಹೇಳಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ಯಾವ ವಿಶ್ವಾಸವನ್ನು ಮೂಡಿಸಿ ಹೇಗೆ ಅಧಿಕಾರಕ್ಕೆ ಬಂದಿತ್ತೋ ಆ ವಿಶ್ವಾಸವನ್ನು ಉಳಿಸಿಕೊಳ್ಳಲು ವಿಫಲವಾಗಿದೆ. ಭ್ರಷ್ಟಾಚಾರದ ವಿರುದ್ಧ ಮಾತನಾಡಿದವರು ಈಗ ಎಲ್ಲಾ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಹೆಚ್ಚಿನ ಸಚಿವರ ಮೇಲೆ ಭ್ರಷ್ಟಾಚಾರ ಆರೋಪಗಳಿವೆ. ಮುಖ್ಯಮಂತ್ರಿಗಳೂ ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿಲ್ಲ. ಜನರ ಬದುಕನ್ನು ಹಸನು ಮಾಡುವ ಭರವಸೆ ಕೊಟ್ಟ ಕಾಂಗ್ರೆಸ್ ಬೆಲೆ ಏರಿಕೆ ಮೂಲಕ ಜನಸಾಮಾನ್ಯರ ಬದುಕನ್ನು ದುಸ್ತರ ಮಾಡಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಹಿಂದೆ ಕಾಂಗ್ರೆಸ್ ನೀತಿ ಇದೆ. ಕೇವಲ ಗ್ಯಾರಂಟಿ ಪ್ರಚಾರದಲ್ಲಿ ಸರ್ಕಾರ ತೊಡಗಿದೆ. ಆದರೆ ಜನರ ಬದುಕಿಗೆ ಗ್ಯಾರಂಟಿ ಇಲ್ಲದಾಗಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಯುವಕರು ಹತಾಶರಾಗಿದ್ದಾರೆ. ಅತಿ ಹೆಚ್ಚು ಮಹಿಳೆಯರ ನಾಪತ್ತೆ ಪ್ರಕರಣ ಆಗಿದೆ. ಹೀಗೆ ಎಲ್ಲದರಲ್ಲೂ ಕಾಂಗ್ರೆಸ್ ವಿಫಲವಾಗಿದೆ. ಇದೊಂದೇ ಬಿಜೆಪಿ ಅಧಿಕಾರಕ್ಕೆ ಬರಲು ಸಹಾಯ ಮಾಡದು. ಮುಂದೆ ನಾವೇ ಅಧಿಕಾರಕ್ಕೆ ಬರುವ ಭ್ರಮೆಯಲ್ಲಿ ಇರಬೇಡಿ ಎಂದು ಎಚ್ಚರಿಕೆ ನೀಡಿದರು.

ತಮಿಳುನಾಡಿನಲ್ಲಿ ಡಿಎಂಕೆ ವೈಫಲ್ಯ ಎದ್ದು ಕಾಣುತ್ತಿತ್ತು. ಇದೊಂದೇ ಎಐಡಿಎಂಕೆ ಅಧಿಕಾರಕ್ಕೆ ಬರಲು ಸಹಾಯ ಮಾಡಬಹುದು ಎಂದು ಭಾವಿಸಲಾಗಿತ್ತು. ಆದರೆ ಟಿವಿಕೆ ಪಕ್ಷ ಮಧ್ಯೆ ಬಂದು ಅಧಿಕಾರ ಪಡೆಯಿತು. ಕರ್ನಾಟಕದಲ್ಲೂ ಬಿಜೆಪಿ ನಾಯಕರು ಮುಂದೆ ನಮ್ಮದೇ ಅಧಿಕಾರ ಎಂದು ಸುಮ್ಮನೆ ಕೂರಬೇಡಿ. ದೇಶದಲ್ಲಿ ಕಾಂಗ್ರೆಸ್‌ಗೆ ಮೋದಿ ಅವರು ಒಳ್ಳೆಯ ಪರ್ಯಾಯ ಹೇಗೆ ಕೊಟ್ಟರೋ ಅದೇ ರೀತಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಿಜೆಪಿ ಉತ್ತಮ ಪರ್ಯಾಯ ಎಂದು ಜನ ಭಾವಿಸುವ ರೀತಿ ಅಧಿಕಾರಕ್ಕೆ ಬರಬೇಕೆಂದು ಹೇಳಿದರು.

ಕೆಂಪುಕೋಟೆ ಬಳಿ ಸ್ಫೋಟಕ್ಕೆ ಎಐ ನೆರವು ಪಡೆದಿದ್ದ ಆರೋಪಿ



• ಪ್ರಜೋದಯ ವರದಿ

ನವದೆಹಲಿ: ದೆಹಲಿಯ ಕೆಂಪುಕೋಟೆ ಸಮೀಪ ಕಾರು ಸ್ಫೋಟ ಪ್ರಕರಣದ ಆರೋಪಿಯೊಬ್ಬ ಭಯೋತ್ಪಾದನೆಗಾಗಿ ಕೃತಕ ಬುದ್ಧಿಮತ್ತೆ (ಎ.ಐ) ವೇದಿಕೆಯನ್ನು ದುರುಪಯೋಗಪಡಿಸಿಕೊಂಡಿರುವುದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪತ್ತೆ ಹಚ್ಚಿದೆ. ಈ ಸ್ಫೋಟದಲ್ಲಿ 11 ಜನರು ಮೃತ ಪಟ್ಟು, ಅನೇಕರು ಗಾಯಗೊಂಡಿ ದ್ದರು. 2025ರ ನವೆಂಬರ್ 10 ರಂದು ನಡೆದಿದ್ದ ಸ್ಫೋಟ ಪ್ರಕರಣ ಸಂಬಂಧ ತನಿಖಾ ಸಂಸ್ಥೆಯು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಮೇ 14ರಂದು ಸಲ್ಲಿಸಿದ 7,500 ಪುಟಗಳ ಆರೋಪ ಪಟ್ಟಿಯಲ್ಲಿ ಈ ಅಂಶಗಳ ಬಗ್ಗೆ ವಿವರಿಸಲಾಗಿದೆ.

ದೋಷಾರೋಪ ಪಟ್ಟಿಯಲ್ಲಿ ಹೆಸರಿಸಿರುವ ಆರೋಪಿಯೊಬ್ಬ ಅಲ್-ಕೈದಾ ಸಂಘಟನೆಗೆ ಸೇರಿದ ಅನ್ಸಾರ್ ಗಜ್ವತ್-ಉಲ್-ಹಿಂದ್‌ನ ಇಂಜಿನಿಯರ್ ಆಗಿದ್ದ ಎನ್ನುವುದು ಗೊತ್ತಾಗಿದೆ. ಎಕ್ಯುಐಎಸ್ ಮತ್ತು ಅದರ ಅಂಗ ಸಂಸ್ಥೆಗಳನ್ನು ಭಯೋತ್ಪಾದಕ ಸಂಘಟನೆಗಳೆಂದು ಗೃಹ ಸಚಿವಾಲಯ ಘೋಷಿಸಿದೆ.

ಆರೋಪಿಗಳು ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯ ಕಾಜಿಗುಂಡ್ ಅರಣ್ಯದಲ್ಲಿ ಕಚ್ಚಾ ಬಾಂಬ್ (ಐಇಡಿ) ತಯಾರಿಸಿ ಪರೀಕ್ಷಿಸಿದ್ದಾರೆ. ಅಲ್ಲದೆ ಅವುಗಳನ್ನು ತಯಾರಿಸಲು ಬಳಸಲು ಅಳವಡಿಸಿಕೊಂಡಿದ್ದ ಅತ್ಯಂತ ನಿಖರವಾದ ಹಾಗು ಬಹುತೇಕ ಪ್ರಯೋಗಾಲಯ ಮಟ್ಟದ ವ್ಯವಸ್ಥಿತ ವಿಧಾನವನ್ನು ರೂಪಿಸಿಕೊಂಡಿರುವ ಬಗ್ಗೆ ವಿವರಿಸಲಾಗಿದೆ.

ಪ್ರಕರಣದ ಆರೋಪಿ ಜಸೀರ್ ಬಿಲಾಲ್ ವಾನಿ 202425ರ ಅವಧಿಯಲ್ಲಿ ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯದ ಆವರಣದಲ್ಲಿ 2-3 ಬಾರಿ ತಂಗಿದ್ದ. ಈ ಪಿತೂರಿಗೆ ತಾಂತ್ರಿಕ ಬೆಂಬಲ ನೀಡಿದ್ದ. ಪ್ರಕರಣದ ಮುಖ್ಯ ಸಂಚುಕೋರ ಡಾ. ಉಮರ್ ಉನ್ ನಬಿಯನ್ನು ಜಸೀರ್ ಬಿಲಾಲ್ ವಾನಿಗೆ ಡಾ. ಆದಿಲ್ ಅಹ್ಮದ್ ರಾದರ್ ಪರಿಚಯಿಸಿದ್ದ ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ.

ಧರ್ಮೇಂದ್ರ ಪ್ರಧಾನ್ ರಾಜೀನಾಮೆವರೆಗೂ ಕಾಂಗ್ರೆಸ್ ವಿಶ್ರಮಿಸದು

• ಪ್ರಜೋದಯ ವರದಿ

ನವದೆಹಲಿ: ನೀಟ್‌ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡುವವರೆಗೂ ಕಾಂಗ್ರೆಸ್ ವಿಶ್ರಮಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ತಿಳಿಸಿದ್ದಾರೆ.

ಜತೆಗೆ ಪ್ರಶ್ನೆಪತ್ರಿಕೆ ಸೋರಿಕೆಯಂಥಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ಕಟ್ಟುನಿಟ್ಟಾದ ವ್ಯವಸ್ಥೆಯನ್ನು ರೂಪಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ, ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐ ನೇತೃತ್ವದಲ್ಲಿ ಹೈದರಾಬಾದ್‌ನಲ್ಲಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯ ವಿಡಿಯೋವನ್ನು ರಾಹುಲ್ ಗಾಂಧಿ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಅಪಾಯದಲ್ಲಿ ಸಿಲುಕಿದೆ, ಲಕ್ಷಾಂತರ ವಿದ್ಯಾರ್ಥಿಗಳು ಬೀದಿ ಗಿಳಿದು ಪ್ರತಿಭಟಿಸುತ್ತಿದ್ದಾರೆ. ಇಷ್ಟಾದರೂ ಸರ್ಕಾರ ಮಾತ್ರ ತುಟಿ ಬಿಚ್ಚುತ್ತಿಲ್ಲ. ವಿದ್ಯಾರ್ಥಿ ಗಳ ಸಮಸ್ಯೆಗೆ ಪ್ರತಿಕ್ರಿಯಿಸುವ ಬದಲು ಸರ್ಕಾರವು ಆರೋಪಗಳಿಂದ ನುಣುಚಿಕೊಳ್ಳುವಲ್ಲಿ ನಿರತವಾಗಿದೆ ಎಂದು ರಾಹುಲ್ ಆರೋಪಿಸಿದ್ದಾರೆ.

ಅಕ್ಷಯ ನಿಧನ

ಬೆಂಗಳೂರು: ಕರ್ನಾಟಕ ರಣಜಿ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ಎಸ್.ಎಲ್. ಅಕ್ಷಯ್ (39) ಅವರು ಭಾನುವಾರ ಮೂರನೇ ಡಿವಿಷನ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಆಡುವ ಸಂದರ್ಭದಲ್ಲಿ ಹೃದಯಸ್ತಂಭನದಿಂದ ನಿಧನರಾದರು.

ಆವಲಹಳ್ಳಿಯ ಎಸ್‌ಎಸ್‌ಎಲ್‌ಎಸ್ ಕ್ರೀಡಾಂಗಣದಲ್ಲಿ ನಡೆದಿದ್ದ ಸಫೈಯರ್ ಕ್ಲಬ್ ತಂಡದ ಪರವಾಗಿ ಅವರು ಭಾರತ ಕ್ರಿಕೆಟ್ ಕ್ಲಬ್ ವಿರುದ್ಧದ ಪಂದ್ಯದಲ್ಲಿ ಆಡುತ್ತಿದ್ದರು. ಬಲಗೈ ಮಧ್ಯಮ ವೇಗಿ ಅಕ್ಷಯ್ ಬೆಳಗಿನ ಅವಧಿಯಲ್ಲಿ ನಾಲ್ಕು ಓವರ್ ಬೌಲಿಂಗ್ ಮಾಡಿದ್ದರು. ಸ್ವಲ್ಪ ಆಯಾಸ ಮತ್ತು ಅಸ್ವಸ್ಥತೆ ಕಂಡುಬಂದಾಗ ಬೌಲಿಂಗ್ ಮುಂದುವರಿಸಲಿಲ್ಲ. ಸ್ಲಿಪ್‌ನಲ್ಲಿ ಫೀಲ್ಡಿಂಗ್ ಮಾಡತೊಡಗಿದರು. ಸುಸ್ತು ಹೆಚ್ಚಿದ್ದರಿಂದ ಮೈದಾನ ತೊರೆದರು. ಆದರೂ ಎದೆ ನೋವು ಹೆಚ್ಚಿದ ಕಾರಣ ಅವರನ್ನು ಸಮೀಪದ ಆಸ್ಪತ್ರೆಗೆ ಕರೆ ದೊಯ್ಯಲಾಯಿತು. ಆದರೆ ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ : ಕಾಂಗ್ರೆಸ್ ಮಹತ್ವದ ಸಭೆ

• ಪ್ರಜೋದಯ ವರದಿ

ಬೆಂಗಳೂರು : ಮುಂದಿನ ವಿಧಾನಸಭಾ ಚುನಾವಣೆ ಮತ್ತು ನಂತರದ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಚುನಾವಣಾ ಆಯೋಗ ಜೂನ್ 20ರಿಂದ ಆರಂಭಿಸಲಿರುವ ಮತದಾರರ ಪಟ್ಟಿ ತೀವ್ರ ವಿಶೇಷ ಪರಿಷ್ಕರಣೆಯ ಸಂದರ್ಭದಲ್ಲಿ ಜಾಗೃತರಾಗಿರುವಂತೆ ಕಾಂಗ್ರೆಸ್ ಪಕ್ಷ ತನ್ನ ಕಾರ್ಯಕರ್ತರಿಗೆ ಹಾಗೂ ಮುಖಂಡರಿಗೆ ಕಟ್ಟೆಚ್ಚರ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ವಿಧಾನಪರಿಷತ್ ಸದಸ್ಯರು, ಕಳೆದ ಚುನಾವಣೆಗಳಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪರಾಜಿತ ಅಭ್ಯರ್ಥಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾಲೋಚನೆ ನಡೆಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗ ನಡೆಸುವ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ, ಬಿಜೆಪಿ

ಯೇತರ ಸರ್ಕಾರಗಳಿಗೆ ಮುಳುವಾಗುತ್ತಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷ ಮುಂಚಿತವಾಗಿಯೇ ಎಚ್ಚೆತ್ತುಕೊಂಡಿದೆ. ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಸ್‌ಐಆರ್ ಬಗ್ಗೆ ಸುದೀರ್ಘ ಚರ್ಚೆ ನಡೆದಿದ್ದು, ಸಚಿವರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಪಕ್ಷದ ವತಿಯಿಂದ ಕೆಲವು ನಿರ್ದೇಶನಗಳನ್ನು ನೀಡಲಾಗಿದೆ. ಉಳಿದಂತೆ ಶಾಸಕರು, ವಿಧಾನ ಪರಿಷತ್ ಸದಸ್ಯರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೆಲವು ನಿರ್ದೇಶನಗಳನ್ನು ನೀಡಬೇಕಿದೆ. ಈ ಹಿನ್ನಲೆಯಲ್ಲಿ ಸಿದ್ದರಾಮಯ್ಯ ಅವರು ಮಹತ್ವದ ಸಭೆ ನಡೆಸುತ್ತಿದ್ದಾರೆ.

ಈ ಮೊದಲು ಬಿಹಾರದಲ್ಲಿ ಮೊದಲ ಹಂತದ ಮತದಾರರ ಪಟ್ಟಿ ಪರಿಷ್ಕರಣೆಯಾಗುವ ವೇಳೆ ಸುಮಾರು 47 ಲಕ್ಷ ಮತದಾರರನ್ನು ಕೈಬಿಡಲಾಗಿತ್ತು. ನಂತರದ ಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆಯನ್ನು ಮೀರಿ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೇರಿತ್ತು.

ಎರಡನೇ ಹಂತದ ಮತದಾರರ ಪಟ್ಟಿಯಲ್ಲಿ ಉತ್ತರ ಪ್ರದೇಶದಲ್ಲಿ 2.05 ಕೋಟಿ (ಶೇ.13.21), ಪಶ್ಚಿಮ ಬಂಗಾಳದಲ್ಲಿ 83.86 ಲಕ್ಷ (ಶೇ.20.9), ಗುಜರಾತ್‌ನಲ್ಲಿ 68 ಲಕ್ಷ (ಶೇ.14.5), ಮಧ್ಯಪ್ರದೇಶದಲ್ಲಿ 34.25 ಲಕ್ಷ (ಶೇ.5.96), ಛತ್ತೀಸ್‌ಗಢದಲ್ಲಿ 25 ಲಕ್ಷ (ಶೇ.11.8), ರಾಜಸ್ಥಾನದಲ್ಲಿ 31 ಲಕ್ಷ (ಶೇ.5.7), ತಮಿಳುನಾಡಿನಲ್ಲಿ 74 ಲಕ್ಷ (ಶೇ.11.5), ಕೇರಳದಲ್ಲಿ 9 ಲಕ್ಷ (ಶೇ.3.24), ಗೋವಾದಲ್ಲಿ 1.28 ಲಕ್ಷ (ಶೇ.10.8), ಪುದುಚೇರಿಯಲ್ಲಿ 77 ಸಾವಿರ (ಶೇ.7.54), ಅಂಡಮಾನ್-ನಿಕೋಬಾರ್‌ನಲ್ಲಿ 52 ಸಾವಿರ ಮತದಾರರನ್ನು ಕೈಬಿಡಲಾಗಿತ್ತು.

ಒಟ್ಟು 10 ರಾಜ್ಯಗಳು ಹಾಗೂ 2 ಕೇಂದ್ರಾಡಳಿತ ಪ್ರದೇಶಗಳಲ್ಲಿ 5.18 ಕೋಟಿ (ಶೇ.10.92) ಮತದಾರರನ್ನು ಕೈಬಿಡಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಭರ್ಜರಿ ಗೆಲುವಿಗೆ ಎಸ್‌ಐಆರ್ ಕಾರಣವೆಂದು ಆರೋಪಿಸಲಾಗುತ್ತಿದೆ.

ಬಿಜೆಪಿಯೇತರ ಪಕ್ಷಗಳು ಎಸ್‌ಐಆರ್ ಅನ್ನು ತೀವ್ರವಾಗಿ ವಿರೋಧಿಸಿವೆ. ಅದರಲ್ಲೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಎಸ್‌ಐಆರ್‌ಗೆ ಸಂವಿಧಾನಾತ್ಮಕ ಆಧಾರ ಇರುವುದರಿಂದ ನ್ಯಾಯಾಲಯದಿಂದ ವಿಪಕ್ಷಗಳಿಗೆ ಯಾವುದೇ ನೆರವು ಸಿಗಲಿಲ್ಲ.

ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ವಿಶ್ಲೇಷಣೆ ನಡೆದಿದ್ದು, ಅನೇಕ ಮಾರ್ಗಗಳ ಬಗ್ಗೆ ಚರ್ಚೆಗಳು ನಡೆದಿವೆ. ಇಂದಿನ ಸಭೆಯಲ್ಲಿ ಪ್ರಮುಖವಾಗಿ ಶಾಸಕರು ಹಾಗೂ ಪರಾಜಿತ ಅಭ್ಯರ್ಥಿಗಳು ತಮ್ಮ ಕ್ಷೇತ್ರಗಳಲ್ಲಿ ನಡೆಯುವ ಮತದಾರರ ಪಟ್ಟಿ ಪರಿಷ್ಕರಣೆ ಮೇಲೆ ತೀವ್ರ ನಿಗಾ ವಹಿಸಬೇಕು. ಕೇಂದ್ರ ಚುನಾವಣಾ ಆಯೋಗ ಬಿಎಲ್‌ಒಗಳನ್ನು ನೇಮಿಸಿದೆ. ಮತಗಟ್ಟೆ ಏಜೆಂಟರನ್ನು ನೇಮಿಸಲು ರಾಜಕೀಯ ಪಕ್ಷಗಳಿಂದ ಪಟ್ಟಿ ಪಡೆಯಲಾಗುತ್ತಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ಪ್ರತಿಯೊಂದು ಹಂತದಲ್ಲೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಪಕ್ಷದ ಮುಖಂಡರಿಗೆ ಸೂಚನೆ ನೀಡಿದ್ದಾರೆ.

ಮತಗಟ್ಟೆ ಏಜೆಂಟರನ್ನು ನೇಮಿಸುವಾಗ ಜಾಗ್ರತೆ ವಹಿಸಬೇಕು. ಅವರ ಹಿನ್ನೆಲೆಯನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು. ಈ ಮೊದಲು ಇತರ ಪಕ್ಷಗಳಲ್ಲಿ ಇದ್ದು, ಹೊಸದಾಗಿ ಕಾಂಗ್ರೆಸ್‌ಗೆ ಬರುವವರನ್ನು ಪರಿಗಣಿಸಬಾರದು. ಆರ್‌ಎಸ್‌ಎಸ್ ಸೇರಿದಂತೆ ಬಿಜೆಪಿ ಬೆಂಬಲಿತ ಸಂಘಟನೆಗಳ ಜೊತೆ ಗುರುತಿಸಿಕೊಂಡಿರುವವರು ಅಥವಾ ಆ ಸಂಘಟನೆಗಳ ಮಾಜಿ ಕಾರ್ಯಕರ್ತರು ನೇಮಕವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ಈ ಮೊದಲು ರಾಹುಲ್ ಗಾಂಧಿ ದೇಶಾದ್ಯಂತ ಮತದಾರರ ಪಟ್ಟಿಯಲ್ಲಿ ಅಕ್ರಮಗಳ ಆರೋಪ ಮಾಡಿದ್ದಾಗ, ಕರ್ನಾಟಕದ ಮಹದೇವಪುರ ವಿಧಾನಸಭಾ ಕ್ಷೇತ್ರವನ್ನು ಉಲ್ಲೇಖಿಸಿದ್ದರು. ಆ ವೇಳೆ ಕಾಂಗ್ರೆಸ್‌ನ ಸಚಿವರಾಗಿದ್ದ ಕೆ.ಎನ್. ರಾಜಣ್ಣ, ಪಕ್ಷದ ನಿರ್ಲಕ್ಷ್ಯವನ್ನು ಪ್ರಶ್ನಿಸಿದ್ದರು. ಮತದಾರರ ಪಟ್ಟಿ ಪರಿಷ್ಕರಣೆಯ ವೇಳೆ ಕಾಂಗ್ರೆಸ್ ಪಕ್ಷದಿಂದ ನೇಮಕವಾಗಿದ್ದ ಮತಗಟ್ಟೆ ಏಜೆಂಟರು ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿದ್ದರು. ನಂತರದ ಬೆಳವಣಿಗೆಯಲ್ಲಿ ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಲಾಗಿತ್ತು. ಮುಂದೆ ಇದೇ ರೀತಿಯ ಸಮಸ್ಯೆಗಳು ಉಂಟಾಗಬಾರದೆಂಬ ಕಾರಣ ಕ್ಕಾಗಿ ಕಾಂಗ್ರೆಸ್ ಪಕ್ಷ ಈಗಲೇ ಎಚ್ಚೆತ್ತುಕೊಂಡಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK